Suspension of land revenue in respet of Gadag Taluk for the year of 1983-84 ;
as required under Section 194 (2) of the Karnataka Land Revenue Act, 1964."

ANNOUNCEMENT

Mr. Speaker.—I have received the following message from the Chairman, Legislative Council.

'As required under 114 of the Rules of Procedure and Conduct of Cusiness in Karnataka Legislative Council I send hecewith the following Bills which havc peen ggreed to by the Legislative Council on 30th March. 1984 without recommendations.

1) Karnataka Appropriation(No.3) Bill 1984.
2) Karnataka Appropriation (No.4) Bill, 1984."

ನಿಯಮ 334ರ ಮೇರೆಗೆ

ವಿಷಯ : ಕ್ರಾಂತಿ ಪತ್ರಿಕೆಯ ಸಂಪಾದಕರ ಕೊಲೆ ಬಗ್ಗೆ ನಿಲುವಳಿ ಸೂಚನೆಯ ಚರ್ಚೆಗೆ ಅವಕಾಶ ಕೋರಿ :

Sri M. Veerappa Moily.—ಮಾನ್ಯ ಅಧ್ಯಕ್ಷರೇ,....

Mr. Speaker.--The Adjournment Motion matter has already been discussed.

Sri M. Veerappa Moily.—I will not discuss the matter which has already been discussed. ನಾನು ಆ ವಿಚಾರ ಹೇಳುತ್ತಿಲ್ಲ.

ಅಧ್ಯಕ್ಷರು.—ನಿಯಮ 334ರ ಪ್ರಕಾರ ನೋಟೀಸ್ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ನಿಲುವಳಿ ಸೂಚನೆಗೆ ಯೋಗ್ಯವಾಗಿದೆಯೆಂದು ಮನವರಿಕೆ ಮಾಡಲು ತಾವು ಅವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ನಿಲುವಳಿ ಸೂಚನೆಗೆ ಬರುವುದಿಲ್ಲ ಅಂದರೆ. ನಾವು ನಿಯಮ 334ರ ಸಂಬಂಧದಲ್ಲಿ ಈ ವಿಷಯವನ್ನು ಎತ್ತಬಹುದು.

Mr. Speaker .—The same matter has been discussed.

Sri Veerappa Moily.--I am not discussing the same matter. ಸಿದ್ದರಾಮೇಶ್ವರ ಅವರ ಕೊಲೆಯ ಪ್ರಕರಣ ಸದನದಲ್ಲಿ ಅನೇಕಬಾರಿ ಚರ್ಚೆಗೆ ಬಂದಿದೆ. ಅದು ಚರ್ಚೆಗೆ ಬಂದಾಗ ಅದರ ಬಗ್ಗೆ ಸಿ. ಬಿ. ಐ.ಗೆ ರೆಫರ್ ಮಾಡುತ್ತೇವೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಗೃಹ ಇಲಾಖೆಗೆ ಬರೆಯುತ್ತೇವೆಂದು ಹೇಳಿ, ಬರೆದ ಒಂದು ಪ್ರತಿಯನ್ನು ಮಾನ್ಯ ಮುಖ್ಯಮಂತ್ರಿಗಳು ನನಗೂ ಕಳುಹಿಸಿದ್ದಾರೆ. ನಾನು ಕೊಲೆಯ ಬಗ್ಗೆ ವಿಶ್ಲೇಷಣೆ ಮಾಡಲಿಕ್ಕೆ ನಿಂತಿಲ್ಲ. ಈಗ ಪ್ರಶ್ನೆ ಏನಿದೆ ಅಂದರೆ ಸಿ. ಒ. ಡಿ. ಯವರು ಈ ಕೊಲೆಯ ಬಗ್ಗೆ ಎನ್‌ಕ್ವಾಯರಿ ಮಾಡುತ್ತಿದ್ದಾರೆ. ಸಿ. ಒ. ಡಿ. ತನಿಖೆಯ ಬಗ್ಗೆ ಯಾವುದೇ ಮಾತನ್ನು ಆಡಬಾರದು ಎನ್ನುವ ಪರಿಜ್ಞಾನವನ್ನು ಇಟ್ಟು ಕೊಂಡು ನಾನು ಈ ವಿಚಾರವನ್ನು ಮಾತನಾಡುತ್ತೇನೆ. ಕೊಲೆಯ ಪ್ರಕರಣದ ಬಗ್ಗೆ ಸಿ. ಒ. ಡಿ.ಯವರು ತನಿಖೆಮಾಡತ್ತಿದ್ದಾರೆ. ಕರ್ನಾಟಕರಾಜ್ಯ ಸಿ. ಒ. ಡಿ. ಪೋಲೀಸರ ಬಗ್ಗೆ ಈ ಸದನದಲ್ಲಿ ಮೆಚ್ಚಿಗೆಯನ್ನು ಹೇಳಬೇಕು. ಕರ್ನಾಟಕ ಪೋಲೀಸ್ ಇಲಾಖೆಯ ಪರಂಪರೆ ಅಷ್ಟಿಷ್ಟಲ್ಲ. ಪರಂಪರೆ ಬಹಳ ಉನ್ನತವಾದುದು. ಅಂತಹ ಉನ್ನತವಾದ ಪರಂಪರೆ ಕರ್ನಾಟಕ ರಾಜ್ಯ ಪೋಲೀಸ್‌ನವರಿಗೆ ಇದೆ ಎಂಬುದನ್ನು ಸಿ. ಒ. ಡಿ. ಮುಖಾಂತರ ಅವರು ತೋರಿಸಿ ಕೊಟ್ಟಿದ್ದಾರೆ.

ಶ್ರೀ ಪಿ. ರಾಮದೇವ್.—ನನ್ನ ಕ್ರಿಯಾಲೋಪ ಇದೆ. ಮಾನ್ಯ ಮೊಯಿಲಿಯವರು ಹೇಳತಕ್ಕದ್ದು ಈ ಸದನದಲ್ಲಿ ಈಗಾಗಲೇ ಚರ್ಚಿಯಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಚರ್ಚಾತೀತವಾದ ವಿಚಾರ.

ಶ್ರೀ ಪಿ. ರಾಮದೇವ್.—ಸ್ವಲ್ಪ ದಯಮಾಡಿ ಕೇಳಿ. The issue has alreadye been discussed. The issue cannot be reopened in the same sssion. That is my point of order.

ಶ್ರೀ ಗೋವಿಂದ ಪಿ. ಒಡೆಯರಾಜ್.—ಯಾವ ರೂಲ್ ಪ್ರಕಾರ ಈ ಕ್ರಿಯಾಲೋಪವನ್ನು ಎತ್ತಿದ್ದೀರಿ ?

(ಮುಂದಲ)

ಶ್ರೀ ಗೋವಿಂದ ಪಿ. ಒಡೆಯರಾಜ್.—ಯಾವ ನಿಯಮದ ಪ್ರಕಾರ ಈ ಕ್ರಿಯಾಲೋಪವನ್ನು ಎತ್ತುತ್ತಿದ್ದೀರಿ ಹೇಳಿ.

(ಗೊಂದಲ)

ಶ್ರೀ ಪಿ. ರಾಮದೇವ್.—ನನಗೆ ನೀವು ಪಾಠ ಹೇಳಿಕೊಡಬೇಕಾಗಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.— ನಾನು ಕೇಳುತ್ತಿರುವುದು ಯಾವ ನಿಯಮ ಪ್ರಕಾರ ಕ್ರಿಯಾಲೋಪವನ್ನು ಎತ್ತುತ್ತಿದ್ದೀರಿ ಎಂದು.

ಶ್ರೀ ಪಿ. ರಾಮದೇವ್.—ಈ ಸದನದಲ್ಲಿ ನೀವು ಒಬ್ಬರೇ ಬುದ್ಧಿವಂತರೆಂದು ತಿಳಿದುಕೊಳ್ಳಬೇಡಿ. ಬೇರೆಯವರೂ ಇದ್ದಾರೆ. ಇದೇ ಸದನದಲ್ಲಿ ಹಿಂದೆ....

(ಗೊಂದಲ)

ಶ್ರೀ ಪಿ. ರಾಮದೇವ್.—ನಿಲುವಳಿ ಸೂಚನೆಯ ಈ ವಿಚಾರದಲ್ಲಿ ಹಿಂದೆ ಹಲವಾರು ಗಂಟೆಗಳ ಕಾಲ ಚರ್ಚೆ ಆಗಿದ್ದು. ಈಗ ಪುನ: ಪ್ರಸ್ತಾಪಮಾಡುತ್ತಿದ್ದೀರಿ. ಒಮ್ಮೆ ಚರ್ಚೆಯಾಗಿದ್ದನ್ನು ಮತ್ತೊಮ್ಮೆ ಚರ್ಚೆಗೆ ತೆಗೆದುಕೊಳ್ಳಬಾರದು ಎಂದು ನಿಯಮ ಇದೆ. ಇದಕ್ಕೆ ತಾವು ಅವಕಾಶ ಕೊಡಬಾರದು ಎಂಬುದಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇದು ಜನತಾ ಸ್ಟೈಲ್ ಆಫ್ ಕ್ರಿಯಾಲೋಪ ಅಂತ ಕಾಣುತ್ತದೆ.

ಶ್ರೀ ಎಂ. ರಘುಪತಿ.—ಇದರಲ್ಲಿ ನೀವು ರಾಜಕೀಯವನ್ನು ಏಕೆ ಸೇರಿಸುತ್ತಿರಿ ?

(ಗೊಂದಲ)

Mr. Speaker.—I am bringing to the notice of the hon-members that I am sitting here.

Sri Govinda P. Vodeyaraj.—I am bringing to your kind notice this is the Janata style of Kriyalopa-

ಶ್ರೀ ಪಿ. ರಾಮದೇವ್.—ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲವಲ್ಲ. ಇದು ಹಿಂದೆ ಚರ್ಚೆಯಾಗಿರತಕ್ಕಂಥ ವಿಚಾರ. ಸಿದ್ದರಾಮೇಶ್ ಕೊಲೆ ಬಗ್ಗೆ ಗಂಟೆಗಟ್ಟಲೆ ಇಲ್ಲಿ ಚರ್ಚೆಯಾಗಿದ್ದು ಇದಕ್ಕೆ ಸರ್ಕಾರ ಉತ್ತರ ಕೊಟ್ಟಿದೆ. ಇದರ ಬಗ್ಗೆ ಈಗ ಸಿ. ಓ. ಡಿ. ತನಿಖೆ ನಡೆಯುತ್ತಿದೆ. ಈ ಹಂತದಲ್ಲಿ ಎನ್‌ಕ್ವೈರಿಗೆ ತೊಂದರೆಯಾಗದ ಹಾಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ರೈಸ್ ಮಾಡಿದ್ದರೆ ಆಗುತ್ತಿತ್ತು. ಸರ್ಕಾರ ಮಾಡಿರತಕ್ಕ ಕ್ರಮದ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. The investigation is in progress. ಇದು ಈಗಾಗಲೇ ಚರ್ಚೆ ಮಾಡಿರತಕ್ಕಂಥ ವಿಚಾರ. ದಯವಿಟ್ಟು ಇದಕ್ಕೆ ಪುನ: ಅವಕಾಶ ಕೊಡಬಾರದು. ಸದನದ ವೇಳೆ ಬಹಳ ಅಮೂಲ್ಯವಾದದ್ದು.

ಅಧ್ಯಕ್ಷರು,—ಇದರಲ್ಲಿ ತಾವು ಏನು ಹೇಳಿದ್ದೀರಿ—"Involvement of police in Gulbarga"–I hope the hon. Leader of the Opposition would keep two things in mind. One is, this should not become an allied motter connected with the murder of Siddaramesh, Editor of Kranthi Ranga. Secondly, the matter is under investsgation and it should not come in the way....

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೇ, ಅದು ಕ್ರಾಂತಿರಂಗ ಅಲ್ಲ. ನೋಡಿ

ಅಧ್ಯಕ್ಷರು.—ಹೌದು. ಇದು ಕ್ರಾಂತಿ ಪತ್ರಿಕೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಹೇಳಿದ ಪ್ರಕಾರ ತನಿಖೆಗೆ ಯಾವುದೇ ರೀತಿಯಿಂದ ತೊಂದರೆ ಬಾರದ ಹಾಗೆ ಇದರ ಬಗ್ಗೆ I am not going to pass any remarks. ಅದಕ್ಕೆ ನಾನು ಪ್ರಸ್ತಾಪ ಮಾಡುವ ಮೊದಲೇ ಇದರ ವಿಚಾರದಲ್ಲಿ ಪ್ರಜ್ಞೆ ಇಟ್ಟುಕೊಂಡು ಪ್ರಸ್ತಾಪ ಮಾಡುವಾಗಲೂ ಕೂಡ ಹೇಳಿದ್ದೇನೆ. ಈ ತನಿಖೆ ಯಾವುದೇ ರೀತಿಯ ತೊಂದರೆ ಬರಬಾರದು·--Regarding the involvement of police in Gulbarga in connection with the murder of Siddaramesh, Editor of Kranti Daily, Gulbarga, who are supposed to Protect the life or property of the public,which has created chaos and aniety in the minds of the people of the State. ಇದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆನೆ ಇದರ ತನಿಖೆ ನಡೆಯುತ್ತಿರುವಾಗ ಕೊಲೆಗೆ ಸಂಬಂಧಪಟ್ಟ ವಿಚಾರ ಪ್ರಸ್ತಾಪ ಮಾಡಬಾರದು. We should not

pre-judice the investigation ಆದನ್ನು ಬಿಟ್ಟಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದರಲ್ಲಿ ಪ್ರಶ್ನೆ ಇಷ್ಟು. ಮಾನ್ಯ ಸದಸ್ಯರಾದ ರಾಮದೇವ್ ಅವರು ..

ಶ್ರೀ ಗೋವಿಂದ ಪಿ. ಒಡೆಯರಾಜ್.—ಕ್ರಿಯಾಲೋಪ ಎತ್ತುವುದಕ್ಕೆ ಯಾರಾದರೂ ಬೇಕು. ಮಂತ್ರಿಗಳು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಅದಕ್ಕೋಸ್ಕರ ಕ್ರಿಯಾಲೋಪ ಎತ್ತುವುದಕ್ಕೆ ಯಾರಾದರೂ ಒಬ್ಬರು ಬೇಕು ಎಂದು ಹೀಗೆ ಮಾಡಿರಬಹುದು.

ಅಧ್ಯಕ್ಷರು.—ಹೀಗೆ ಅಂತ ರೂಲ್‌ನ್ನು ಅಪ್ಲೈ ಮಾಡಿದ್ದೀನು ?

ಶ್ರೀ ಗೋವಿಂದ ಪಿ. ಒಡೆಯರಾಜ್.—ನಿಯಮಾವಳಿಯ ಪ್ರಸ್ತಕವನ್ನು ತಂದು ಯಾವ ನಿಯಮಾವಳಿ ಎಂದು ಹೇಳಿ ನಾವು ಪ್ರಸ್ತಾಪಮಾಡಿದ್ದೇವೆ. ನಾನು ಈ ತರಹದ ಕೆಲಸ ಮಾಡಿಲ್ಲ. ಇದನ್ನು ಬೇಕಾದರೆ ವರದಿ ತರಿಸಿ ತಾವು ನೋಡಬಹುದು.

Mr. Speaker.—Alright, let him conclude.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಸದಸ್ಯರಾದಂಥ ರಾಮದೇವ್‌ರವರು ಕ್ರಿಯಾಲೋಪ ಎತ್ತಿದ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಈ ವಿಚಾರವನ್ನು ತೆಗೆದುಕೊಳ್ಳುವಾಗ ತಾವು ಕೂಡ ಅಪ್ಪಣೆ ಕೊಟ್ಟಿದ್ದೀರಿ. ಇದರ ಬಗ್ಗೆ ಸೂಕ್ಷ್ಮವಾದಂಥ ವಿಚಾರ ಇರುತ್ತದೆ ಇದು ಕೊಲೆಯ ತನಿಖೆಗೆ ಸಂಬಂಧಪಟ್ಟ ವಿಚಾರ ಇರುತ್ತದೆ. ಯಾವುದೇ ರೀತಿಯಲ್ಲೂ ತನಿಖೆಗೆ ತೊಂದರೆಯಾಗಬಾರದು. ಭಾದಕ ಆಗಬಾರದು, ಏಕೆಂದರೆ ಈ ಸದನದಲ್ಲಿ ಎತ್ತಿದಂಥ ವಿಚಾರದಲ್ಲಿ ನಿಷ್ಪಕ್ಷಪಾತವಾದ ವಿಚಾರಣೆಗೆ ತೊಂದರೆಯಾಗಬಾರದು. ಇದನ್ನು ನಾವು ಸಂಪೂರ್ಣವಾಗಿ ಮನಸ್ಸಿನಲ್ಲಿ ಇಟ್ಟುಕೊಂಡು ಪ್ರಸ್ತಾಪ ಮಾಡುತ್ತಿದ್ದೇನೆ. ಇದರಲ್ಲಿ ಬಹುಶಃ ತಮ್ಮ ಕ್ರಿಯಾಲೋಪ ಸಿ. ಓ. ಡಿ. ಯನ್ನು ಹೊಗಳಿದ್ದಕ್ಕೆ, ಕರ್ನಾಟಕ ಪೋಲೀಸ್ ಪರಂಪರೆಯ ಸಂಸ್ಕೃತಿ ಬಗ್ಗೆ ತಮ್ಮ ಕ್ರಿಯಾಲೋಪ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಯಾವುದೇ ಹೊಗಳಿಕೆಗೆ ಪಾಲು ಸೀಗಬೇಕಾದಾಗ ತೆಗಳಿಕೆಗೂ ಪಾಲು ಸಿಗಬೇಕು. ಇಲ್ಲಿ ಪ್ರಸ್ತಾಪ ಮಾಡುವುದೆನೆಂದರೆ ಸಿ. ಓ. ಡಿ. ಯವರು ಒಂದು ರೀತಿಯ....

ಡಾ। ವಿ. ಎಸ್. ಆಚಾರ್ಯ.—ಸಿ. ಓ. ಡಿ. ಯನ್ನು ಹೊಗಳಿ ಅಪ್ಪಕ್ಕೆ ಬಿಟ್ಟುಬಿಡಿ ಎಂದು ಅಭಿಪ್ರಾಯ ಇರಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಿ. ಓ. ಡಿ. ಹೊಗಳಿಕೆಯನ್ನು ಬಿಟ್ಟುಬಿಡೋಣ. ಹೊಗಳಿಕೆಯಿಂದ ನಿಷ್ಪಕ್ಷಪಾತವಾದ ತನಿಖೆಗೆ ತೊಂದರೆಯಾಗಬಾರದು. ಅದಕ್ಕೆ ಹೊಗಳಿಕೆ ಕಾರಣವಾಗಬಾರದು. ಹೊಗಳಿದರು ಅಂತ ನಿಷ್ಪಕ್ಷಪಾತ ತನಿಖೆಯ ಜಾಡು ಬಿಟ್ಟು ಹೋಗಬಾರದು. ಈ ಎಚ್ಚರಿಕೆ ನಮಗೆ ಇದೆ. ಈಗ ತನಿಖೆಯಾಗುತ್ತಿರುವುದರಿಂದ ಬೇರೆ ಬೇರೆ ಘಟನೆಗಳಿಗೆ ಸಂಬಂಧಪಟ್ಟಿದ್ದೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಿಷ್ಪಕ್ಷಪಾತವಾದ ತನಿಖೆ ಆಗಬೇಕೆಂಬುದೇ ನಮ್ಮೆಲ್ಲರ ಆಸೆ. ಆದಕ್ಕೆ ಬಹುಶಃ ಯಾರದ್ದೂ ವಿವಾದ ಇಲ್ಲವೆಂದು ನಾನು ಭಾವಿಸುತ್ತೇನೆ. ಸಿ. ಓ. ಡಿ. ಯನ್ನು ಹೊಗಳತಕ್ಕಂಥ ಕೆಲಸವನ್ನೂ ನಾನು ಮಾಡುವುದಿಲ್ಲ. ಇದರಲ್ಲಿ ರಾಜಕೀಯವನ್ನು ಬಳಸಬೇಕಾದ ಅವಶ್ಯಕತೆ ಕೂಡ ಇಲ್ಲ. ಯಾರೂ ಕೂಡ ಬಳಸಬಾರದು. ಇಲ್ಲಿ ಪ್ರಶ್ನೆ ಇಷ್ಟೆ. ನಾನು ಸರ್ಕಾರದ ಗಮನಕ್ಕೆ ತರತಕ್ಕ ವಿಚಾರ ಇಷ್ಟೆ. ಈಗ ಪೋಲೀಸಿನವರು ಇಬ್ಬರು ಸಬ್-ಇನ್‌ಸ್ಪೆಕ್ಟರ್‌ಗಳು— ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಅರೆಸ್ಟ್ ಮಾಡಿದ್ದಾರೆ. ಈ ಸದನದಲ್ಲಿ ಈ ವಿಷಯ ಪ್ರಸ್ತಾಪ ಆದಾಗ, ಸಿದ್ದರಾಮೇಶನ ಮೇಲೆ ಅಸಾಲ್ಟ್ ಯಾವಾಗ ಮಾಡಿದರು, ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಗೃಹ ಮಂತ್ರಿಗಳೂ ಆಗಿದ್ದರು. ಇದರ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದನ್ನು ನಾನು ಪ್ರತ್ಯೇಕವಾಗಿ ಓದಿ ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಆ ಸಂದರ್ಭದಲ್ಲಿ "ಗೃಹಖಾತೆಯನ್ನು ಹೊಂದಿರತಕ್ಕ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡುತ್ತಿದ್ದಾರೆ. ಆ ಹೇಳಿಕೆ ಬಗ್ಗೆ ತಪ್ಪನ್ನು ಹುಡುಕತಕ್ಕ ಕೆಲಸ ನಾವು ಮಾಡಲಿಲ್ಲ. He is a Home Minister. ಯಾವ ಮಾಹಿತಿ ಇದೆ ಅದನ್ನು ಬಹಳ ಜವಾಬ್ದಾರಿಯಿಂದ ಕೊಡುತ್ತಿದ್ದಾರೆಂದು" ನಾವು ಸ್ವೀಕಾರಮಾಡಿ ಆ ಸಂದರ್ಭದಲ್ಲಿ ನಾವು ಕೂತುಕೊಂಡಿದ್ದು ಇದೆ. ಹೇಳಿಕೆಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಕೂಡ ಆವತ್ತು he has suppressed the facts. ಆವಾಗ ಸಿದ್ದರಾಮೇಶನನ್ನು ಒಬ್ಬ ತಪ್ಪಿಸ್ಥ, ಆತನ ಮೇಲೆ ಎಷ್ಟೋ ಕೇಸುಗಳು ಇವೆ ಎಂದು ಹೇಳಿದರೇ ಹೊರತು ಆತನ ಮೇಲೆ ನಡೆದಂಥ ಧಾಳಿ, ಪೋಲೀಸಿನವರು ಏನೇನು ಮಾಡುತ್ತಿದ್ದಾರೆ. —ಇದರ ಬಗ್ಗೆ ಸರಿಯಾದ ಬೆಳಕನ್ನು ಈ ಸದನಕ್ಕೆ ಚಲ್ಲಲಿಲ್ಲ.

Sri M. Veerappa Moily.—I am confining only to suppression of facts even with regard to the incident which happended on 26-8-83 ಅಂದು ಮೆರವಣಿಗೆ ಮಾಡಿದಾಗ ಪೋಲೀಸರು ಅಮಾನುಷವಾದ ರೀತಿಯಲ್ಲಿ ಅವನನ್ನು ಥಳಿಸಿದರು. ಆ ಬಗ್ಗೆ ಹೇಳಿಕೆ ಕೊಟ್ಟಿದ್ದು ಪೋಲೀಸರು ದೌರ್ಜನ್ಯದಿಂದ ವರ್ತಿಸಿದರೂ ಕೂಡಾ

ಇಲ್ಲಿ ಹೇಳಿಕೆ ಕೊಡುವಾಗ ಸದನದ ಗಮನಕ್ಕೆ ತರಲಿಲ್ಲ. ಗುಲ್ಬರ್ಗಾ ಪೋಲೀಸರು ಏನು ಒಂದು ವರದಿ ಕೊಟ್ಟರು, ಇದನ್ನು ಸಾಬೀತು ಮಾಡತಕ್ಕಂಥ ಪ್ರಯತ್ನ ಮಾಡಿದರು. ತನ್ಮೂಲಕ ಗೃಹ ಮಂತ್ರಿಯಾದಂಥ ಮುಖ್ಯಮಂತ್ರಿಯವರು ಈ ವಿಚಾರವನ್ನು ಸದನದ ಮುಂದಿಡಬೇಕಾಗಿದ್ದರೂ ಇಡತಕ್ಕಂಥ ಪ್ರಯತ್ನ ಮಾಡಲಿಲ್ಲ, ಈ ಕೆಲಸ ಯಾವಾಗ ಮಾಡಲಿಲ್ಲವೋ, ಸ್ಥಳೀಯ ಪೋಲೀಸರಿಗೆ ಹೆಚ್ಚಿನ ಧೈರ್ಯ ಬಂತು. ಆವರ ಮೇಲೆ ಕ್ರಾಂತಿ ಪತ್ರಿಕೆಯವರು ದಿನಾಂಕ 18-11-1983 ರಂದು ಒಂದು ಹೇಳಿಕೆ ಕೊಟ್ಟಿದ್ದಾರೆ. ಮುಖ್ಯಮಂತ್ರಿಯವರಿಗೆ ಬಹಿರಂಗವಾಗಿ ಪತ್ರ ಬರೆದು ಅಮಾನುಷ ದೌರ್ಜನ್ಯ, ಕಳ್ಳತನ ಮಾಡಿದ ನೀಚ ಪೋಲೀಸರ ವಿರುದ್ಧ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಲಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ಪಬ್ಲಿಸಿಟಿಯಾಗಿದೆ. ದಿನಾಂಕ 18-1-1983 ರಂದು ಈ ಪತ್ರಿಕೆಯಲ್ಲಿ ಸಂಬಂಧಪಟ್ಟ ಪೋಲೀಸ್ ಸೂಪರಿಂಟೆಂಡೆಂಟ್ ಅವರ ಫೋಟೋ ಹಾಕಿ ನಾಗರೀಕ ರಕ್ಷಣಾ ಸಮಿತಿಯವರು "ನೀಚ ಪೋಲೀಸರ ವಿರುದ್ಧ ತಕ್ಷಣ ಸರ್ಕಾರ ಕ್ರಮ ಕೈಗೊಳ್ಳಲಿ" ಎಂದು ತಿಳಿಸಿದ್ದಾರೆ.

> "ಕ್ರಾಂತಿ ಸಂಪಾದಕ ಸಿದ್ದರಾಮೇಶ್ವರ ಮೇಲೆ ಅಮಾನುಷ ಹಲ್ಲೆ ನಡೆಸಿ, ಬಂಗಾರದ ಚೈನು, ನಗದು ಹಣ ದೋಚಿದ ಹಾಗೂ ಅವರ ವಿರುದ್ಧವೇ ಸುಳ್ಳು ಗುಪ್ತಿ ಸೃಷ್ಟಿಸಿದ ಕಳ್ಳ ನೀಚ, ಕಾನೂನು ಭಕ್ಷಕ, ಪೋಲೀಸರ ಮೇಲೆ ಕೋರ್ಟು ವಾರೆಂಟ್‌ಗಳನ್ನು ತಾನೇ ಹರಿದು ಹಾಕಿ, ನಿರಪರಾಧಿಯ ಮೇಲೆ ಸುಳ್ಳು ಆರೋಪ ಹೊರಿಸಿ, ಸಿದ್ದರಾಮೇಶ್ವರ ಮೇಲಿನ ಹಲ್ಲೆಯ ಸೂತ್ರಧಾರನಾದ ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಯತ್ನಿಸಿದ ಸಿದ್ದರಾಮೇಶ್ವರನ್ನು ಹಾಗೂ ಕ್ರಾಂತಿ ಪತ್ರಿಕೆಯನ್ನು ಮುಗಿಸಲು ಒಳ ಸಂಚು ನಡೆಸಿರುವ, ಪೋಲೀಸ್ ಸೂಪರಿಂಟೆಂಡೆಂಟ್ ನಾರಾಯಣನ ಮೇಲೆ ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಲಿ. ಚಂಬಳ್ಳಿ ಕೊಳ್ಳದ ಡಕಾಯಿತರನ್ನು ಮಿರಿಸಿ ಕಳ್ಳತನ, ಹಲ್ಲೆ ನಡೆಸಿದ ಕಾನೂನು ಭಕ್ಷಕ ಪೋಲೀಸರ ದೌರ್ಜನ್ಯಗಳ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯಲಿ"

ಎಂದು ಈ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಕಾಣಿಸಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಪೋಲೀಸಿನವರನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿ ಬಹಿರಂಗವಾಗಿ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟ ಮೇಲೂ ಕೂಡಾ ಗೃಹಮಂತ್ರಿಯಾದಂಥ ಮುಖ್ಯಮಂತ್ರಿಯವರು ಇನ್ನೂ ತಿಳಿಸಲಿಲ್ಲ. ಮಾತ್ರವಲ್ಲದೆ ಬೆಂಗಳೂರಿಗೆ ಬಂದು ಸನ್ಮಾನ್ಯ ಸಚಿವರಾದಂಥ ಶ್ರೀ ರಘುಪತಿಯವರನ್ನು ಭೇಟಿಮಾಡಿ ವಿಚಾರ ತಿಳಿಸಿದ್ದಾರೆ. ಈ ಸದನದಲ್ಲೂ ಕೂಡಾ ಇದರ ಬಗ್ಗೆ ವಿವರವಾಗಿ ಚರ್ಚೆಯಾಗಿದೆ. ಈ ವಿಚಾರವನ್ನು ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಇಲ್ಲಿ ಎತ್ತಿದ್ದೇವು. ಸನ್ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆಯವರು ಒಂದು ವಿಚಾರವನ್ನು ಸೂಕ್ಷ್ಮವಾಗಿ ಈ ಸದನದಲ್ಲಿ ಹೇಳಿದ್ದಾರೆ. ಪೋಲೀಸ್ ನಾಯಿ ಆ ಸ್ಥಳದಿಂದ ನೇರವಾಗಿ ಬಸ್ ಸ್ಟಾಂಡಿಗೆ ಹೋಗಿ ಅಲ್ಲಿಂದ ಪೋಲೀಸ್ ಠಾಣೆಗೆ ಹೋದವು ಎಂದು ಹೇಳಿದಾಗ, ಆಪಾದನೆಯನ್ನು ಗಂಭೀರವಾಗಿ ತೆಗೆದುಕೊಳ್ಳದೆ, ಮುಖ್ಯಮಂತ್ರಿಗಳು ಬಹಳ ಲಘುವಾಗಿ ಪೋಲೀಸ್ ಇಲಾಖೆಯ ಜನರನ್ನು ರಕ್ಷಣೆ ಮಾಡುವ ಉದ್ದೇಶದಿಂದ ಪೋಲೀಸ್ ಸ್ಟೇಷನ್ನಿಗೆ ಹೋಗದೆ, ಪೋಲೀಸ್ ನಾಯಿ ಬೇರೆ ಎಲ್ಲಿ ಹೋಗಬೇಕು ಎನ್ನುವ ಮಾತನ್ನು ಹೇಳಿದರು. ಆ ವಿಚಾರ ಕಡತದಲ್ಲಿದೆ. ಪೋಲೀಸಿನವರು ಇನ್‌ವಾಲ್ವ್‌ಮೆಂಟ್ ಆಗಿದ್ದರೂ ಸದನಕ್ಕೆ ಮರೆಮಾಚ ತಕ್ಕಂಥ, ಅಡಗಿಸತಕ್ಕಂಥ ಪ್ರಯತ್ನವನ್ನು ಉದ್ದೇಶ ಪೂರ್ವಕವಾಗಿ ಮಾಡಿದ್ದಾರೆ ಎನ್ನುವುದು ನಿನ್ನೆ ನಡೆದಿರತಕ್ಕ ಘಟನೆಯಿಂದ ಕಾಣುತ್ತದೆ, ಸತ್ಯ ಮರೆಮಾಚುವ ಪ್ರಯತ್ನ ಮಾಡದೆ ತಕ್ಷಣ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ತನಿಖೆ ಮಾಡಬೇಕೆಂದು ಹೇಳಿದಾಗ, ಪೋಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೆ ಹೊರತು ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಿಲ್ಲ. ಪೋಲೀಸರು ಆರು ತಿಂಗಳ ಕಾಲ ಅಂದರೆ ಸುಮಾರು ಆಗಸ್ಟ್ ತಿಂಗಳಿನಿಂದ ಸತತವಾಗಿ ಈ ಮನುಷ್ಯನ ಮೇಲೆ ದೌರ್ಜನ್ಯ ಮಾಡಿದ್ದಾರೆ, ಸಂಬಂಧಪಟ್ಟ ಸ್ಥಳೀಯ ಜಿಲ್ಲಾ ಮಂತ್ರಿಗಳು ಕೂಡಾ ಬೆದರಿಕೆ ಹಾಕಿದ್ದಾರೆ ಎಂದು ಹೇಳಿದ ಮೇಲೆ, ಸಿ. ಬಿ. ಡಿ. ತನಿಖೆ ಮಾಡಿ ಇದರಲ್ಲಿ ಆರೆಸ್ಟ್ ಮಾಡುವವರೆಗೆ ಪೋಲೀಸ್ ಅಧಿಕಾರಿಗಳು ಸಸ್ಪೆಂಡ್ ಆಗಿಲ್ಲ ಎಂದು ಹೇಳಿದ್ದಾರೆ. ಗೃಹಮಂತ್ರಿಗಳಾದ ಮುಖ್ಯಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ಯಾವ ರೀತಿ ನಿರ್ವಹಣೆ ಮಾಡಿದ್ದಾರೆ ಎನ್ನುವುದು ಜನಗಳಿಗೆ ಬಿಟ್ಟಂತಹ ವಿಚಾರ.

Mr. Speaker.—That has already been discussed.

Shri M. Veerappa Moily.—I am not telling everything. I am only referring to this matter, ಈ ಒಂದು ಅಭಿಪ್ರಾಯ ಜನರಲ್ಲಿ ಬಂದಿದೆ ಕಾನೂನು ರಕ್ಷಣೆ ಮಾಡುವವರೇ ಕೊಲೆ ಪ್ರಕರಣದಲ್ಲಿ ಒಳಗಾಗಿದ್ದಾರೆ. ಈ ವಿಷಯದಲ್ಲಿ ಜನರಲ್ಲಿ ಭೀತಿ ಇದ್ದು ಇವರಿಂದ ಯಾವ ರೀತಿಯಾದ ನ್ಯಾಯ ಸಿಗಲಿಕ್ಕೆ ಸಾಧ್ಯ ಇದೆ ಎನ್ನುವುದು ಕರ್ನಾಟಕ ರಾಜ್ಯ ಜನತೆಯಲ್ಲಿ ಭಯ ಹುಟ್ಟಿದೆ. ಇವೊತ್ತು ಜನತಾ ಪಕ್ಷದವರು ಅಧಿಕಾರದಲ್ಲಿದ್ದಾರೆ, ಎಮರ್ಜೆನ್ಸಿ ವೇಳೆ

ಯಲ್ಲಿ ತಾವು ಕೂಡಾ ಆಕ್ಟೀವಾಗಿ ಕೆಲಸ ಮಾಡಿದಿರಿ. ಪೋಲೀಸಿನವರು ಅಧಿಕಾರವನ್ನು ದುರುಪಯೋಗ ಮಾಡಿಕೊಂಡರು ಎಂದು ಹೇಳಿದಾಗ ಕೆಲವು ಸತ್‌ಸಂಪ್ರದಾಯಗಳನ್ನು ಪ್ರಜಾಪ್ರಭುತ್ವದ ಪರಂಪರೆಗಳನ್ನು ನಾವು ಯಾವಾಗಲೂ ಎತ್ತಿ ಹಿಡಿಯುವುದರಲ್ಲಿ ಮೊದಲ ಪಂಕ್ತಿಯಲ್ಲಿದ್ದೇವೆಂದು ಹೇಳತಕ್ಕಂಥ ಜನ ಹೌದೋ ಅಲ್ಲವೋ ಎನ್ನುವುದು ಅವರ ಮಾತಿನಿಂದ ಅವರ ಕರ್ತವ್ಯದಿಂದ ತೋರಿಬರಬೇಕು.

ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಸರ್ಕಾರದವರನ್ನು ನ್ಯಾಯ ಕೇಳುವುದಿಲ್ಲ. ತಮ್ಮನ್ನು ಕೇಳುತ್ತಿದ್ದೇನೆ. ನ್ಯಾಯ ಕೊಡತಕ್ಕಂಥ ಪರಿಸ್ಥಿಯಲ್ಲಿ ಸರ್ಕಾರದವರು ಇಲ್ಲ. 75 ರಿಂದ 77ರವರೆಗೆ ಎಮರ್ಜೆನ್ಸಿ ಇಂದ್ಯಂಥ ಸಮಯದಲ್ಲಿ ಕೇರಳದಲ್ಲಿ ಏನು ನಡೆಯಿತು, ಅದೇ ರೀತಿಯ ಪ್ರಸಂಗ ಇಲ್ಲಿ ನಡೆದಿದೆ. ಇದು ತೋರಿಕೆ ಮಟ್ಟಕ್ಕೆ ಹಾಗೆ ಕಾಣುತ್ತೆ. ಕೇರಳದ ರಾಜನ್ ಅವರನ್ನು ಪೋಲೀಸಿನವರು ಮರ್ಡರ್ ಮಾಡಿದರು.

Mr. Speaker.—How is it connected.

Mr. M. Veerappa Moily.—It is directly connected with this. I am trying to convince, ಕೊಲೆ ವಿಚಾರ ಮಾತನಾಡಬೇಡಿಕೆಂದು ಹೇಳಿದ್ದೀರಿ. ಇದು ಸಂಬಂಧಪಟ್ಟ ವಿಚಾರ. ರಕ್ಷಣೆ ಮಾಡತಕ್ಕಂಥದ್ದು ಗೃಹಖಾತೆಗೆ ಸಂಬಂಧಪಟ್ಟ ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪ ಮಾಡಿ ತಮ್ಮ ಮನವೊಲಿಸಲಿಕ್ಕೆ ಪೂರ್ವಭಾವಿ ಪ್ರಯತ್ನ ಮಾಡುವ ಕೆಲಸ ಬಿಟ್ಟು, ಆಪಾದನೆಗಳ ಪಟ್ಟಿಯನ್ನು ತಯಾರು ಮಾಡಿಕೊಂಡು ಚರಿತ್ರೆಯ ಪುಟಗಳನ್ನು ತಮ್ಮ ಮುಂದಿಟ್ಟು ಅವುಗಳನ್ನು ಓದಿ ಎಂದು ಹೇಳುತ್ತಿದ್ದಾರೆ. ಈಗಾಗಲೇ ಸುಮಾರು ಇಪ್ಪತ್ತು ನಿಮಿಷಗಳ ಕಾಲ ಮಾತನಾಡಿದ್ದಾರೆ. ನಿಲುವಳಿ ಸೂಚನೆ ಬಿಟ್ಟು ಮಿಕ್ಕ ಎಲ್ಲಾ ವಿಷಯಗಳನ್ನು ಹೇಳಿದ್ದಾರೆ.

Mr. Speaker.—I will bring to the notice of the Hon. Leader of the Opposition. Rule 61(V) says: the motion shall not review discussion on a matter which has been discussed in the same session.

Sri Veerappa Moily.—I am bringing new matter, to the notice of the House. It is connected with the propriety of the Chief Minister holding the portfolio and continuing in office.

Mr. Speaker.—That is not the subject matter. The matter is regarding involvement of police.

Shri M. Veerappa Moily.—It is directly connected with the Police Department.

Shri A. Lakshmisagar.—You can make allegations against the Chief Minister but that is not the subject matter. By no stretch of imagination it can be brought in the matter of this adjournment motion.

Shri M. Veerappa Moily.—It is suppose to given protection to the people but itis killing the people.

I am quoting a smili similar to that.

ಈಗ ರಾಜನ್ ಕೇಸಿನಲ್ಲಿ ಪೋಲೀಸಿನವರು ಮರ್ಡರ್ ಮಾಡಿದ್ದಾರೆಂದು ಆಪಾದನೆ ಬಂತು ಆ ಆಪಾದನೆ ಬಂದ ಮೇಲೆ ಈ ವಿಷಯ ಅಸೆಂಬ್ಲಿಯಲ್ಲಿ ಬಂತು. ಅಸೆಂಬ್ಲಿಯಲ್ಲಿ ಪ್ರಸ್ತಾಪ ಬಂದಾಗ ಶ್ರೀ ಅಚ್ಯುತ ಮೆನನ್ ಆಗಿನ ಗೃಹ ಮಂತ್ರಿಗಳಾಗಿದ್ದರು. ಈ ಸಂದರ್ಭದಲ್ಲಿ ಶ್ರೀ ಕರುಣಾಕರನ್‌ರವರು ಚೀಫ್ ಮಿನಿಸ್ಟರ್ ಆಗಿದ್ದರು. ಈ ರೀತಿ ಪ್ರಸ್ತಾಪ ಬಂದಾಗ ಆಗಿನ ಗೃಹ ಮಂತ್ರಿಗಳು ಆಗಿದ್ದವರು ಏನು ಪೋಲೀಸ್ ವರದಿ ಕೊಟ್ಟರು ಅದನ್ನು ಸದನದಲ್ಲಿ ಹೇಳಿದ್ದರಿಂದ ನಿಜವಾದ ವಿಚಾರವನ್ನು ಆಗಿನ ಗೃಹ ಮಂತ್ರಿಗಳು : ಸಪ್ರಸ್ ಮಾಡಿದರು, ಆ ಇಶ್ಯೂ ಮೇಲೆ ....

Mr. Speaker.—How can you discuss these matters ?

ಶ್ರೀ ಎ. ಲಕ್ಷ್ಮೀಸಾಗರ್.—ಫ್ಯಾಕ್ಟ್ಸನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸರಿಯಾಗಿ ಹೇಳುತ್ತಿಲ್ಲ. ಹೈಕೋರ್ಟಿನಲ್ಲಿ ಫೈಂಡಿಂಗ್ ಇದ್ದು ಅದರ ಪ್ರಕಾರ ಅವರು ರಾಜಿನಾಮೆ ಕೊಟ್ಟರು. ಅದಕ್ಕೂ ಇದಕ್ಕೂ ಯಾವ ಸಂಬಂಧ. ?

ಶ್ರೀ ವೀರಪ್ಪ ಮೊಯಿಲಿ.—ಯಾವ ಸಂಬಂಧವಿದೆ ಎಂಬುದನ್ನು ಪ್ರಸ್ತಾಪಮಾಡಿ ಹೇಳುತ್ತಿದ್ದೇವೆ. After all we have to uphold democratic norms. Same time history will have to be quoted either for good or bad. He had to step down. He has resigned from the Chief Ministership.

Mr. Speaker.—Please confine to the issue.

Sri M. Veerappa Moily.—I am conscious of that. ಈಗ ವಿಷಯ ಇಷ್ಟೆ, ಈಗ ಸತ್ಸಂಪ್ರದಾಯ ಎತ್ತಿ ಹಿಡಿದಿರತಕ್ಕಂಥ ವಿಚಾರ ಏನು ಇದೆ. ಶ್ರೀ ಸಿದ್ದರಾಮೇಶ್ ಕೊಲೆಯ ಪ್ರಕರಣದಲ್ಲಿ ಪ್ರತಿ ಹೆಜ್ಜೆಯಲ್ಲೂ ಕೂಡ ಮುಖ್ಯಮಂತ್ರಿಯವರು ಇವತ್ತಿನವರೆಗೆ ಪೋಲೀಸಿನವರು ಇನ್‌ವೊಲ್ವ್ಡ್ ಆಗಿದ್ದರು ಎಂದು ಹೇಳಿದರೂ ಕೂಡ ಆಗಸ್ಟ್ ತಿಂಗಳಿನಿಂದ ಇವತ್ತಿನವರೆಗೂ ಹೇಳಲಿಲ್ಲ. ಇವತ್ತು ಪೋಲೀಸಿನವರು ಇನ್‌ವೊಲ್ವ್ಡ್ ಆಗಿದ್ದರು ಎಂಬ ವಿಷಯ ಗೊತ್ತಾಗಿದೆಯೆಂದು ಹೇಳಿದ್ದಾರೆ. ಸಿ. ಓ. ಡಿ. ಇನ್‌ವೆಸ್ಟಿಗೇಷನ್ ಆದ ಮೇಲೆ ಪೋಲೀಸಿನವರು ಇನ್‌ವೋಲ್ವ್ಡ್ ಆಗಿದ್ದಾರೆ ಎನ್ನತಕ್ಕಂಥ ವಿಚಾರ ಹೊರಗಡೆ ಬಂದಿದೆ.

ಪ್ರತಿಯೊಂದು ಸಾರಿಯ ಹೇಳಿಕೆ ಕೊಡುವಾಗಲೂ ಮುಖ್ಯಮಂತ್ರಿಗಳವರು ಪೋಲೀಸಿನವರು ತಪ್ಪು ಮಾಡಿರತಕ್ಕದ್ದನ್ನು ಮರೆ ಮಾಚತಕ್ಕ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಇಂತಹವರ ಕೈಯಲ್ಲಿ ಅಂದರೆ ಕರ್ನಾಟಕ ರಾಜ್ಯದ ಗೃಹ ಮಂತ್ರಿಗಳ ಕೈಯಲ್ಲಿ ಕಾನೂನು ಸುವ್ಯವಸ್ಥೆ ಇಲ್ಲದಿದ್ದರೆ ಕರ್ನಾಟಕ ರಾಜ್ಯದ ಜನ ಹೇಗೆ ಬದುಕುವುದಕ್ಕೆ ಸಾಧ್ಯ ಎಂಬುದೇ ಮೂಲಭೂತವಾದ ಪ್ರಶ್ನೆ ನಮ್ಮ ಮುಂದೆ ಇವತ್ತು ಇದೆ. ರಾಜನ್ ಕೇಸ್ ಪ್ರಕರಣದಲ್ಲಿ ಕರುಣಾಕರನ್‌ರವರು ಹೇಗೆ ರಾಜೀನಾಮೆ ಕೊಟ್ಟರೂ ಆದೇ ರೀತಿಯಾಗಿ ಈ ಕೊಲೆ ಪ್ರಕರಣದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಡಬೇಕು. ಇಂತಹ ಹೀನ ಕೃತ್ಯದಲ್ಲಿ....

(ಗೊಂದಲ)

ಶ್ರೀ ಎಂ. ರಘುಪತಿ.—ಯಾವ ಹೀನ ಕೃತ್ಯವನ್ನೂ ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಪ್ರಜಾಪ್ರಭುತ್ವದಲ್ಲಿ ಹೇಳುವುದು ಒಂದು, ಮಾಡುವುದು ಇನ್ನೊಂದು. ಅದು ಇಡೀ ರಾಷ್ಟ್ರದ ಜನತೆಗೆ ಮತ್ತು ರಾಜ್ಯದ ಜನತೆಗೆ ಗೊತ್ತಾಗಿದೆ. ರಾಜನ್ ಕೊಲೆಯ ಪ್ರಕರಣದಲ್ಲಿ ಪೋಲೀಸಿನವರು ಇನ್‌ವೊಲ್ವ್ಡ್ ಆಗಿ ಮರ್ಡರ್ ಮಾಡಿದ್ದಾರೆಂದು ಗೊತ್ತಾದಾಗ ಆಗಿನ ಗೃಹ ಸಚಿವರಾಗಿದ್ದವರು ರಾಜೀನಾಮೆ ಕೊಟ್ಟರು. ಆದೇ ರೀತಿ ಈ ಪ್ರಕರಣದಲ್ಲಿ ಕೂಡ ರಾಮಕೃಷ್ಣ ಹೆಗಡೆಯವರು ಗೃಹ ಖಾತೆಯನ್ನು ಇಟ್ಟುಕೊಂಡಿರುವುದರಿಂದ, ಪೋಲೀಸಿನವರು ಈ ಒಂದು ಕೊಲೆ, ಖೂನಿ ಮಾಡಿದಂತಹ ಸಂದರ್ಭದಲ್ಲಿ ಅವರು ರಾಜೀನಾಮೆ ಕೊಡದಿದ್ದರೆ ಅವರು ನಾಚಿಕೆಗೆಟ್ಟ ಈ ಸರ್ಕಾರವನ್ನು ಹೇಗೆ ಮುಂದುವರೆಸಿಕೊಂಡು ಹೋಗುತ್ತಾರೆಂದು ಕೇಳಬೇಕಾಗುತ್ತದೆ.

ಶ್ರೀ ಎಂ. ರಘುಪತಿ.—ಶಹಭಾಷ್....

ಶ್ರೀ ಎಂ. ವೀರಪ್ಪ ಮೊಯಿಲಿ.—ಕೊಲೆ ಮಾಡಿದ್ದಕ್ಕೆ ಶಹಭಾಷ್ ಎಂದು ಹೇಳತಕ್ಕಂಥಾದ್ದು ನಿಮ್ಮ ಉದ್ಧಟತನ.

ಶ್ರೀ ಎಂ. ರಘುಪತಿ.—ನೀವು ರಾಜೀನಾಮೆ ಕೊಡಿ ಎಂದು ಹೇಳಿದಿರಲ್ಲಾ, ಆದಕ್ಕೆ ನಾನು ಶಹಭಾಷ್ ಎಂದು ಹೇಳಿದ್ದು, ಕೊಲೆ ಪ್ರಕರಣದ ಬಗ್ಗೆ ನಾನು ಶಹಭಾಷ್ ಎಂದು ಹೇಳಲಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ರೀತಿಯಾಗಿ ರಕ್ಷಣೆ ಕೊಡದೇ ಸರ್ಕಾರವನ್ನು ಮುಂದುವರಿಸಿಕೊಂಡು ಹೋಗುವುದಾದರೆ ಕರ್ನಾಟಕ ರಾಜ್ಯದಲ್ಲಿ ಯಾರಿಗೂ ರಕ್ಷಣೆ ಸೀಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಇವತ್ತು ನಿಜವಾಗಿಯೂ ಕೂಡ ನಿಮಗೆ ಪ್ರಜಾಪ್ರಭುತ್ವ ರೀತ್ಯ ಘನತೆ ಗೌರವವನ್ನು ಉಳಿಸಿಕೊಂಡು ಹೋಗಬೇಕಾಗಿದ್ದರೆ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಒಂದು ಉತ್ತಮ ಪರಂಪರೆಯನ್ನು ಉಳಿಸಿಕೊಂಡು ಹೋಗಬೇಕಾದರೆ ಮತ್ತು ಪೋಲೀಸ್ ಇಲಾಖೆಯಿಂದ ಜನತೆಗೆ ಸಂಪೂರ್ಣ ರಕ್ಷಣೆ ಸೀಗಬೇಕಾಗಿದ್ದರೆ ಮಾನ್ಯ ಮುಖ್ಯಮಂತ್ರಿಗಳವರು ಈ ಇಲಾಖೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಅವರು ರಾಜೀನಾಮೆ ಕೊಡಬೇಕಾಗುತ್ತದೆ ರಾಜೀನಾಮೆ ಕೊಡದಿದ್ದರೆ ಏತಕ್ಕೆ ರಾಜೀನಾಮೆ ಕೊಡಬೇಕು ಎಂಬ ಮನೋಭಾವನೆ ಇದ್ದರೆ ಅವರು ರಾಜೀನಾಮೆ ಕೊಡುವುದಿಲ್ಲ ಎಂದರ್ಥವಾಗುತ್ತದೆ. ಇದೇ ಮನೋಭಾವನೆಯಿಂದ ಅಧಿಕಾರವನ್ನು ನಡೆಸಿಕೊಂಡು ಹೋಗುವುದಕ್ಕೆ....

ಅಧ್ಯಕ್ಷರು.—ನೀವು ಕೊಟ್ಟಿರತಕ್ಕ ನೋಟಿಸಿನಲ್ಲಿ ಇದ್ಯಾವುದೂ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನೋಟೀಸ್‌ಗೆ ಸಂಬಂಧಪಟ್ಟ ಹಾಗೆ ಗೃಹಖಾತೆಗೆ ಸಂಬಂಧ ಪಟ್ಟ ಹಾಗೆ ಇನ್‌ವೋಲ್ವ್ ಆಗಿರುವುದರಿಂದ ರಾಜ್ಯದ ಗೃಹಖಾತೆಯನ್ನು ಹೊತ್ತ ಮುಖ್ಯಮಂತ್ರಿ ಗಳವರು ಆ ಸ್ಥಾನದಲ್ಲಿ ಮುಂದುವರಿಸಿಕೊಂಡು ಹೋಗತಕ್ಕದ್ದು ಯೋಗ್ಯವಲ್ಲ. ಈ ಸದನದ ಗೌರವ ದೃಷ್ಟಿಯಿಂದ ಮತ್ತು ಕರ್ನಾಟಕ ರಾಜ್ಯದ ಪರಂಪರೆಯ ದೃಷ್ಟಿಯಿಂದ ಅದು ಉಚಿತವಲ್ಲ. ಕೇರಳ ದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಗ್ಗೂ ಸಹ ಅವರು ರಾಜೀನಾಮೆ ಕೊಟ್ಟಿದ್ದು ಇಡೀ ಜಗತ್ತಿಗೆ ಗೊತ್ತಾಗಿದೆ. ಈ ಜನತಾ ಸರ್ಕಾರ ಪ್ರಜಾಪ್ರಭುತ್ವವನ್ನು ಕಟ್ಟುನಿಟ್ಟಾಗಿ ಜಾರಿಗೆ ತರದೇ ಅವರಿಗೆ ಹೇಗೋ ಬಂದಂತಹ ಅಧಿಕಾರವನ್ನು ಉಳಿಸಿಕೊಂಡು ಹೋಗತಕ್ಕಂಥ ಒಂದು ದುಷ್ಟ ಪ್ರವೃತ್ತಿಯನ್ನು ಬೆಳೆಸಿಕೊಂಡು ಹೋಗುತ್ತಿರುವುದು ಸರಿಯಲ್ಲ. ಇದಕ್ಕೆ ಜನತೆಯೇ ಉತ್ತರ ಕೊಡುತ್ತಾರೆಂದು ಹೇಳುವು ದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಪರಂಪರೆಯ ಬಗ್ಗೆ ಆಸಕ್ತಿ ಇದ್ದರೆ, ಕಳಕಳಿ ಇದ್ದರೆ, ಪ್ರಾಮಾಣಿಕತೆ ಇದ್ದರೆ ಅವರು ರಾಜೀ ನಾಮೆ ಕೊಡಬೇಕಾಗುತ್ತದೆ. ಇಲ್ಲವೆಂದರೆ ಅವರು ಅದೇರೀತಿ ಅಧಿಕಾರವನ್ನು ಉಳಿಸಿಕೊಂಡು ಮುಂದು ವರಿಸಿಕೊಂಡು ಹೋದರೆ ಅದಕ್ಕೆ ಜನತೆಯೇ ಉತ್ತರ ಕೊಡುತ್ತಾರೆ. ಈಗಾಗಲೇ ಅನೇಕರು ಉತ್ತರ ಕೊಟ್ಟಿದ್ದಾರೆ. ಬಿ. ಜೆ. ಪಿ. ಯವರು ಆಗಾಗ್ಗೆ ಹೆದರಿಸುತ್ತಾರೆ. ಮತ್ತೊಬ್ಬರು ಹೆದರಿಸುತ್ತಾರೆ. ಮತ್ತು Topple ಮಾಡುತ್ತಾರೆ ಎನ್ನುವ ಮನೋವೃತ್ತಿಯನ್ನು ಬೆಳೆಸಿಕೊಂಡು ಅಧಿಕಾರವನ್ನು ಉಳಿಸಿಕೊಂಡು ಹೋಗುವುದಕ್ಕೆ ಈ ರೀತಿಯಾದ ಕಟ್ಟುಕಥೆಯನ್ನು ಮಾಡಿಕೊಂಡು ಅಧಿಕಾರದಲ್ಲಿ ಮುಂದುವರಿಸಿಕೊಂಡು ಹೋಗುವುದಕ್ಕೆ ಬದಲು ಪ್ರಜಾಪ್ರಭುತ್ವ ರೀತ್ಯಾ ಈ ಸದನದ ಘನತೆ ಗೌರವ ಮರ್ಯಾದೆಯ ದೃಷ್ಟಿಯಿಂದ ಮುಖ್ಯಮಂತ್ರಿಗಳವರು ರಾಜೀನಾಮೆ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಈಗಿನ ಕಾನೂನು ವ್ಯವಸ್ಥೆಯಲ್ಲಿ ಕರ್ನಾಟಕದ ಜನರು ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಧನಂಜಯ ಕುಮಾರ್.—ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು ಕೇಳು ತ್ತಿದ್ದಾರೆ....

(ಗೊಂದಲ)

ಶ್ರೀ ಜಿ. ಪಿ. ಒಡೆಯರಾಜ್.—ಅಧ್ಯಕ್ಷರೇ, ತಾವು ನನ್ನನ್ನು ಮಾತನಾಡಲು ಕರೆದಿದ್ದೀರಿ, ಆದರೆ ನಾನು ಈಲ್ ಆಗದೇನೆ ಮಾನ್ಯ ಸದಸ್ಯರು ಹೇಗೆ ಮಾತನಾಡುತ್ತಿದ್ದಾರೆ ? ಅವರೇನಾದರೂ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆಯೇ ?

(ಗೊಂದಲ)

ಶ್ರೀ ಜಿ. ಪಿ. ಒಡೆಯರಾಜ್.—ನಿಮ್ಮ ಮನಸ್ಸನ್ನು ಒಲಿಸುವುದಕ್ಕೆ ಕೆಲವು ಮಹತ್ವವಾದ ವಿಷ ಯಗಳನ್ನು ತಮ್ಮ ಗಮನಕ್ಕೆ ತಂದು ಈ ಒಂದು ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉಳಿದೆಲ್ಲ ವಿಷಯ ಆಗಲೇ ಹೇಳಿದ್ದಾರೆ.

ಶ್ರೀ ಜಿ. ಪಿ. ಒಡೆಯರಾಜ್.—ಶ್ರೀ ಲಕ್ಷ್ಮೀಸಾಗರ್‌ರವರು ಇದೇ ಸ್ಥಾನದಲ್ಲಿದ್ದಾಗ ಏನೇನು ಹೇಳಿದ್ದಾರೆ ಎನ್ನತಕ್ಕದ್ದು ಪುಟಗಳೇ ಹೇಳುತ್ತದೆ.

Mr. Speaker.—Please ex convince me as to how this is not connected with the matter which already been raised on the floor of this House.

ಶ್ರೀ ಜಿ. ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಈಗ ನಾನು ಎತ್ತಿರತಕ್ಕ ನಿಲುವಳಿ ಸೂಚನೆ. Involvement of police in a murder case. ಇದಕ್ಕಿಂತ ಮುಂಚೆ ಎತ್ತಿರತಕ್ಕದ್ದು ಸಿದ್ದರಾಮೇಶ್ವರರವರ ಮರ್ಡರ್ ಕೇಸಿನ ವಿಷಯ. Police themselves are involved in that particular case. ಎನ್ನತಕ್ಕದ್ದು ಸಿದ್ಧವಾಗಿದೆ ಎನ್ನತಕ್ಕ ಮಾತನ್ನು ನಾನು ಹೇಳುತ್ತಿಲ್ಲ. ಸಿ. ಓ. ಡಿ. ತನಿಖೆಯಿಂದಲೇ ಗೊತ್ತಾಗಿದೆ.

Mr. Speaker.—Same police have given this report.

ಶ್ರೀ ಜಿ. ಪಿ. ಒಡೆಯರಾಜ್.—ಬಹಳ ಮುಖ್ಯವಾದ ವಿಷಯ ಇಲ್ಲಿದೆ ಅದು ಏನೆಂದರೆ ಸಿ.ಓ.ಡಿ. ತನಿಖಾ ಅಧಿಕಾರಿಗಳನ್ನು ಮೊದಲು ಅಭಿನಂದಿಸುತ್ತೇನೆ. ಏತಕ್ಕೆಂದರೆ ಈ ವಿಷಯವನ್ನು ನೋಡಿ ದಾಗ ಅವರು ಯಾವುದೇ ತರಹದ ಒತ್ತಡಕ್ಕೂ ಒಳಗಾಗದೇ ರಾಜಕೀಯ ಅಥವಾ ಸರ್ಕಾರದ ಒತ್ತ ಡಕ್ಕೂ ಒಳಗಾಗದೇ ಕೆಲಸವನ್ನು ನಿರ್ವಹಿಸಿದ್ದಾರೆ. ಮತ್ತೆ ಎಷ್ಟರ ಮಟ್ಟಿಗೆ ನಿರ್ವಹಿಸಿದ್ದಾರೆ ಎನ್ನ ತಕ್ಕದ್ದನ್ನು ನೋಡಿದರೆ ಇಬ್ಬರು ಸಬ್ ಇನ್ಸ್‌ಪೆಕ್ಟರ್‌ರನ್ನು ಅರೆಸ್ಟ್ ಮಾಡಿದ್ದಾರೆ. ಮತ್ತು 4 ಜನ

ಪೇದೆಗಳನ್ನು ಅರೆಸ್ಟ್ ಮಾಡಿ ಜ್ಯುಡಿಯಲ್ ಕಸ್ಟಡಿಗೆ ಒಪ್ಪಿಸಿದ್ದಾರೆ. ಇದರಿಂದ ಏನಾಗಿದೆ ಎಂದರೆ ಪೋಲೀಸಿನವರು, they have definitely involved in this case ಎನ್ನುತಕ್ಕದ್ದು ಸಿ.ಓ.ಡಿ. ತನಿಖೆಯಿಂದ ಗೊತ್ತಾಗುತ್ತದೆ. ಇದು ವಿಷಾದ ಪಡತಕ್ಕ ಸಂಗತಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಆ ದಿನ ಈ ವಿಷಯವನ್ನು ಎತ್ತಿದಾಗ ಈ ಕಡೆಯ ವಿರೋಧ ಪಕ್ಷದವರು ಈ ಕೊಲೆ ಪ್ರಕರಣದಲ್ಲಿ ಪೋಲೀಸರ ಕೈವಾಡ ಇದೆಯೆಂದು ಹೇಳಿದೆವು. ಪೊಲೀಸರು ಇದರಲ್ಲಿ ಬಹಳ ಚುರುಕಾಗಿ ಕೆಲಸ ಮಾಡಿದ್ದಾರೆ ಎಂಬ ವಿಷಯ ಹೇಳಿದರೆ ಮಾನ್ಯ ಮುಖ್ಯಮಂತ್ರಿಯವರು ಅದನ್ನು ಒಪ್ಪಲಿಕ್ಕೆ ತಯಾರಾಗಿರಲಿಲ್ಲ, ಅದನ್ನು ಒಪ್ಪಲಿಲ್ಲ. ಆದರೆ ಇವತ್ತು ಸಿ. ಬಿ. ಡಿ. ಪೋಲೀಸರು,—ಅವರೂ ನಮ್ಮ ರಾಜ್ಯದ ಪೋಲೀಸ್ ಇಲಾಖೆಯವರೇ, ಇದನ್ನು ಸಿದ್ಧಪಡಿಸಿದ್ದಾರೆ. ಪೊಲೀಸರು ಇದರಲ್ಲಿ ಇನ್‌ವಾಲ್ವ್ ಆಗಿರುವ ವಿಷಯ ಬಹಳ ಗಂಭೀರವಾಗಿರುವುದು. ಪೊಲೀಸರು ಇರುವುದು ಜನರ ರಕ್ಷಣೆ ಮಾಡುವುದಕ್ಕೆ, ಜನಗಳಿಗೆ ಸಂರಕ್ಷಣೆ ಕೊಡಬೇಕು. ಅವರ ಆಸ್ತಿಪಾಸ್ತಿಗೆ ರಕ್ಷಣೆ ಕೊಡಬೇಕು, ಜೀವಕ್ಕೆ ರಕ್ಷಣ ಕೊಡಬೇಕು ಜೊತೆಗೆ ರಾಜ್ಯದಲ್ಲಿ ಕಾನೂನು ಹಾಗೂ ಶಾಂತಿ ಸುವ್ಯವಸ್ಥೆ ಪರಿಪಾಲನೆ ಮಾಡತಕ್ಕದ್ದು ಅವರ ಆದ್ಯ ಕರ್ತವ್ಯ. ಈ ಆದ್ಯ ಕರ್ತವ್ಯದಲ್ಲಿ ಪೋಲೀಸರು ವಿಫಲರಾಗಿದ್ದಾರೆ. ಪೋಲೀಸರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಿರುವುದು ಈ ತನಿಖೆಯಿಂದ ಗೊತ್ತಾಗಿದೆ. ಪೊಲೀಸರು ಎಂದರೆ ಯಾರು? ಪೋಲೀಸರು ಸರಕಾರದ ಆಜ್ಞೆಯನ್ನು ಪರಿಪಾಲನೆ ಮಾಡತಕ್ಕ ಇಲಾಖೆಯವರು. ಪೋಲೀಸರ ಇನ್‌ವಾಲ್ವ್‌ಮೆಂಟ್ ಎಂದರೆ ಸರಕಾರದ ಇನ್‌ವಾಲ್ವ್‌ಮೆಂಟ್ ಎಂದು ತಿಳಿದುಕೊಳ್ಳಬೇಕು. ಪ್ರಜಾ ಪ್ರಭುತ್ವದಲ್ಲಿ ಪೋಲೀಸರು ಸರಕಾರದ ಪರವಾಗಿ. ಸರಕಾರದ ಸಲುವಾಗಿ ರಾಜ್ಯದಲ್ಲಿರತಕ್ಕಂಥ ಜನರನ್ನು ರಕ್ಷಣೆ ಮಾಡತಕ್ಕ ದಳದವರು. ಅವರೇನು ಮಾಡಿದರು ಎಂದರೆ, ಆ ದಿನ ಮಾನ್ಯ ಮುಖ್ಯಮಂತ್ರಿಗಳು ಬಹಳ ಜೋರಾಗಿ ಪೊಲೀಸರ ಇನ್‌ವಾಲ್ವ್‌ಮೆಂಟ್ ಇಲ್ಲಿ ಇಲ್ಲ ಎಂದು ಹೇಳಿದರು. ಮತ್ತು ಪೋಲೀಸರನ್ನು ಅವರು ಪ್ರೊಟೆಕ್ಟ್ ಮಾಡಿದರು. ವಿರೋಧ ಪಕ್ಷದ ಸದಸ್ಯರು ಆಪಾದನೆ ಮಾಡಿದಾಗ ಅದನ್ನು ಒಪ್ಪುವುದಕ್ಕೆ ಅವರು ತಯಾರು ಇರಲಿಲ್ಲ. ಪೊಲೀಸರನ್ನು ಪ್ರೊಟೆಕ್ಟ್ ಮಾಡಿದರು. ಅವರಿಗೆ ರಕ್ಷಣೆ ಕೊಟ್ಟರು. ಅವರಿಗೆ ಶಹಬಾಸ್‌ಗಿರಿ ಕೊಟ್ಟರು, ಮಾನ್ಯ ಅಧ್ಯಕ್ಷರೇ, ಅಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಇವತ್ತು ಅದಕ್ಕೆ ತದ್ವಿರುದ್ಧವಾಗಿ ನಡೆದಿರುವುದು ಸಾಬೀತಾಗಿದೆ. ಅದಕ್ಕೋಸ್ಕರ ಪ್ರಜಾಪ್ರಭುತ್ವದಲ್ಲಿ ಸರಕಾರದ ಆಜ್ಞೆ ಪಾಲಿಸಕ್ಕ ಪೋಲೀಸರು, ಗುನ್ನೆಗಾರರು ಎಂದು ಸಾಬೀತಾದಮೇಲೆ, ಅವರು ಸಂಪೂರ್ಣ ತಪ್ಪಿತಸ್ಥರು ಎಂದು ಸಾಬೀತಾಯಿತು. ಪ್ರಜಾಪ್ರಭುತ್ವದಲ್ಲಿ ಸತ್ಸಂಪ್ರದಾಯಗಳನ್ನು ನಾವು ಒಪ್ಪಿದ್ದೇವೆ, ಇದು ನಮ್ಮ ಒಬ್ಬರದ್ದೇ ಆಸ್ತಿ ಎಂದು ಘಂಟಾಘೋಷವಾಗಿ ಹೇಳತಕ್ಕ ಸರಕಾರದವರು, ಇವತ್ತು ಅವರು ತಪ್ಪಿತಸ್ಥರು ಎಂದು ಸಾಬೀತಾದಮೇಲೆ, ತಮಗೆ ಯಾವುದು ಮಾರಲ್, ಯಾವುದು ಧರ್ಮ ಎಂಬುದನ್ನು ವಿಚಾರ ಮಾಡಬೇಕು. ಮಾನ್ಯ ಅಧ್ಯಕ್ಷರೇ, ನಾವು ಆ ದಿನ ಪೋಲೀಸರ ಬಗ್ಗೆ ಮಾತನಾಡಿ, ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿಗೆ ಕೇಳಿದ್ದೆವು. ಒಂದೆರಡು ದಿವಸ ಆದಮೇಲೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಪ್ಪಿಕೊಂಡರು. ಮಾನ್ಯ ಮುಖ್ಯಮಂತ್ರಿಗಳು, ಯಾವುದಾದರೂ ಕೆಲಸ ಇಟ್ಟುಕೊಂಡು ದೆಹಲಿಗೆ ಹೋದಾಗ, ಅನೇಕ ಜನ ಮಂತ್ರಿಗಳನ್ನು ಭೇಟಿ ಮಾಡಿ, ಸರಕಾರದ, ರಾಜ್ಯದ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ, ಮಾಡಿಸಲಿಕ್ಕೆ ಹೋಗುತ್ತಾರೆ. ಇವತ್ತು ಇವರು ಸಿ.ಬಿ.ಐ. ಎನ್‌ಕ್ವೈರಿ ಮಾಡುವಂತೆ ಕೇಂದ್ರಕ್ಕೆ ಬರೆದು ಎಷ್ಟು ದಿವಸ ಆಯಿತು? ಇವರು ಹೋಮ್ ಮಿನಿಸ್ಟರ್ ಏನಿದ್ದಾರೆ ಅವರ ಪತ್ರಿರ ಕುಳಿತುಕೊಂಡು ತಕ್ಷಣ ಎನ್‌ಕ್ವೈರಿ ಮಾಡಿಸುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು? ಅದು ಅವರ ಧರ್ಮ, ಕರ್ತವ್ಯ ಅಲ್ಲವೇ? ಮಾನ್ಯ ಅಧ್ಯಕ್ಷರೇ ಸಿ.ಬಿ.ಐ. ಎನ್‌ಕ್ವೈರಿ ತಕ್ಷಣ ಪ್ರಾರಂಭವಾದರೆ, ನನಗನ್ನಿಸುತ್ತದೆ,—ಇದಕ್ಕೆ ಸಂಬಂಧಪಟ್ಟ ಹಾಗೇ ನಾನು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ, ಸಿ.ಬಿ.ಐ. ಎನ್‌ಕ್ವೈರಿ ಪ್ರಾರಂಭವಾದರೆ, ಬಹಳಷ್ಟು ದೊಡ್ಡ ದೊಡ್ಡ ಜನ ಏನು ಇನ್‌ವಾಲ್ವ್ ಆಗಿದ್ದಾರೆ, ಅದೆಲ್ಲಾ ಇವತ್ತು ಹೊರಗಡೆ ಬರುತ್ತದೆ. ಅದುದರಿಂದ ಇವತ್ತು ಪ್ರಜಾಪ್ರಭುತ್ವದ ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಬರುತ್ತೇವೆ ಎಂಬ ಮಾತನ್ನು ಘಂಟಾಘೋಷವಾಗಿ ಹೇಳುವವರು ಅದಕ್ಕನುಗುಣವಾಗಿ, ನಡೆಯಬೇಕೆಂಬ ಮಾತನ್ನು ನಾನು ಹೇಳುತ್ತೇನೆ. ಇವತ್ತು moraly, ಇದಕ್ಕೆ ಹೋಮ್ ಮಿನಿಸ್ಟರ್ ಜವಾಬ್ದಾರರಾಗಿದ್ದಾರೆ therefore, he must quit the office ಇವತ್ತು ಒಂದು ಸತ್ಸಂಪ್ರದಾಯ, ಒಂದು ಮರ್ಯಾದೆ ಇದೆ ಎಂದು ಹೇಳುವುದಾದರೆ, ಅದನ್ನು ತಾವು ಒಪ್ಪುವುದಾದರೆ, ಜನತಾ ಪಕ್ಷದ ಒಂದು ಧ್ಯೇಯ ಧೋರಣೆಗಳು ಏನಿದ್ದಾವೆ, ಅದಕ್ಕನುಗುಣವಾಗಿ ವರ್ತನೆ ಮಾಡುವುದಾದರೆ ಅವರು ತಕ್ಷಣ ರಾಜೀನಾಮೆ ಕೊಡಬೇಕು.

(ಗೊಂದಲ)

ಶ್ರೀ ವೀರಪ್ಪ ಮೊಯಿಲಿ.—ಮಾನ್ಯ ಅಧ್ಯ ಅಧ್ಯಕ್ಷರೆ, ಇಂತಹ ಗಂಭೀರವಾದ ವಿಚಾರಗಳನ್ನು ಎತ್ತುವಾಗಲೂ ಕೂಡಾ, ಇದರಲ್ಲಿ ಹೋಮ್ ಮಿನಿಸ್ಟರ್ ಇನ್‌ವಾಲ್ವ್ ಆಗಿದ್ದಾರೆ ಎನ್ನುವಾಗಲೂ ಕೂಡಾ ನೀವು ಸಮಾಧಾನವಾಗಿ ನಮಗೆ ರಕ್ಷಣೆ ಕೊಡದಿದ್ದರೆ ಹೇಗೆ?

ಶ್ರೀ ಎ, ಲಕ್ಷ್ಮೀಸಾಗರ್.—ಅವರು ಏನು ಬೇಕಾದರೂ ಹೇಳಿಕೊಳ್ಳಲಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಪತ್ರಕರ್ತರ ಕೊಲೆ ಮಾಡತಕ್ಕದ್ದು ಮೊಟ್ಟಮೊದಲನೆಯದು, ಅದರಲ್ಲಿ ಪೊಲೀಸರು ಇನ್‌ವಾಲ್ವ್ ಆಗಿ ಪೋಲೀಸರೇ ಕೊಲೆ ಮಾಡತಕ್ಕದ್ದು, ನಮ್ಮ ರಾಜಕೀಯ ಇತಿಹಾಸದಲ್ಲೇ ಮೊಟ್ಟಮೊದಲನೆಯದು ಇದು ಬಹಳ ಗಂಭೀರವಾದ ವಿಷಯ ಎಂದು ನಾವು ಯೋಚನೆ ಮಾಡಬೇಕಾಗಿದೆ. ನಿಜವಾಗಿ ಇವತ್ತು ಸರಿಯಾದ ಎನ್‌ಕ್ವೈರಿ ಆಗಬೇಕಾಗಿದ್ದರೆ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು. ಅಲ್ಲಿರತಕ್ಕ ಎಲ್ಲಾ ಪೋಲೀಸ್ ಅಧಿಕಾರಿಗಳನ್ನು ಕೂಡಾ ತಕ್ಷಣ ಸಸ್ಪೆಂಡ್ ಮಾಡಿ ಹೊರಗಡೆ ಕಳುಹಿಸಬೇಕು.

ಶ್ರೀ ಅಜೀಜ್ ಸೇಠ್.—ಮಾನ್ಯ ಸದಸ್ಯರು, ಒಂದು ನಿಮಿಷ ಈಲ್ಡ್ ಆಗಬೇಕು.

ಶ್ರೀ ಗೋವಿಂದ ಪಿ. ವಡೆಯರಾಜ್.—ನಾನು ಮಾತು ಮುಗಿಸಿದ ಮೇಲೆ ಮಾತನಾಡಿ. ಇವತ್ತು ಸತ್ಪ್ರಂಪ್ರದಾಯಗಳನ್ನು ಪಾಲಿಸಬೇಕೆಂದು ಇದ್ದರೆ, ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಲಿ. ಅಲ್ಲಿತಕ್ಕ ಎಲ್ಲಾ ಪೋಲೀಸ್ ಅಧಿಕಾರಿಗಳನ್ನೂ ಸಸ್ಪೆಂಡ್ ಮಾಡಿ ಹೊರಗಡೆ ಕೆಳುಹಿಸಿ ನಂತರ ತನಿಖೆ ಮಾಡಲಿ ಎಂದು ನಾನು ಹೇಳುತ್ತೇನೆ.

Sri Aziz Sait.--I am very grateful to the Hon'ble Member Sri Govinda P. Vodeyaraj. I dont' know whether he is speaking knowingly or unknowingly. He was referring to the report of the C.O.D. The Government has not spared even the Police officers. The report of the C. O. D. enquiry has been published that the Police involvement is there. That means the Government has not spared the police officers. In fact, the Hon'ble Member should have only congratulated the government. But he has no words to congratulate the Government.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸಿ.ಒ.ಡಿ. ಪೋಲೀಸರು ನಿಮ್ಮ ಮುಖ ನೋಡಿ ಎಂದು ಕನ್ನಡಿ ಹಿಡಿದಿದ್ದಾರೆ. ಕನ್ನಡಿ ಗುರುತು ತೋರಿಸಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ನಾವು ಏನು ನೋಟೀಸ್ ಕೊಟ್ಟಿದ್ದೇವೆ, ಆ ನೋಟೀಸ್‌ನಲ್ಲಿ ಪ್ರತಿಯೊಂದು ಮಾತೂ ಬರಬೇಕೆಂದು ಅರ್ಥ ಅಲ್ಲ. ಅದು ಬ್ರೀಫ್ ಆಗಿ ಬರಬೇಕೆಂದು ಹೇಳುತ್ತೇನೆ. ಆ ಅರ್ಥ ಇದರಲ್ಲಿ ಅಡಗಿದೆ. ಮಾನ್ಯ ಮುಖ್ಯಮಂತ್ರಿಯವರು, ಹೋಮ್ ಪೊರ್ಟ್‌ಪೋಲಿಯೋ ಅವರ ಕೈಯ್ಯಲ್ಲಿದೆ, ಅದಕ್ಕೋಸ್ಕರ ಅವರು ರಾಜೀನಾಮೆ ಕೊಡಬೇಕು ಎಂಬ ಅರ್ಥ. ಆ ಅರ್ಥಕ್ಕಾಗಿ ನಾವು ವಾದ ಮಾಡುತ್ತಿದ್ದೇವೆ. ಈ ಮರ್ಡರ್ ಇತಿಹಾಸ ಏನಿದೆ ಅದನ್ನು ನೋಡಿದರೆ, ಮಾನ್ಯ ಮುಖ್ಯಮಂತ್ರಿಯವರು ಅದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂಬ ಮಾತನ್ನು ನಾವು ಹೇಳುತ್ತಿದ್ದೇವೆ. ಈ ಸದನಕ್ಕೆ ಹೇಳುತ್ತಿದ್ದೇವೆ. ಅವರು ಸೆಂಟ್ರಲ್ ಗೌರ್ನಮೆಂಟ್‌ಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ, ಏನು ಪ್ರತಿಯೊಂದು ಕೊಲೆಗೂ ಸೆಂಟ್ರಲ್ ಗಾರ್ನಮೆಂಟ್‌ನವರೇ ಜವಾಬ್ದಾರಿ ಇದ್ದಾರೆಯೇ ಎಂದು ಕೇಳುತ್ತೇನೆ. ವಾಸ್ತವವಾಗಿ ಇದರ ಹಿಂದೆ ಒಂದು ಇತಿಹಾಸ ಇದೆ. 26-8-83 ರಂದು ಏನು ನಡೆಯಿತು? ಪೋಲೀಸರು 'ಈ ರೀತಿ ಮಾಡಬೇಕೆಂದು ಯಾವ ಕಾನೂನಿನಲ್ಲಿದೆ, ಯಾವ ಕಾನ್‌ಸ್ಟಿಟ್ಯೂಷನ್‌ನಲ್ಲಿ ಇದೆ. ಹಿಂದಕ್ಕೆ ನಿಜಾಮ ಸರಕಾರದಲ್ಲಿ ಅಥವಾ ಮಹಾರಾಜರ ಸರಕಾರದಲ್ಲೂ ಕೂಡಾ ಈ ರೀತಿ ಇರಲಿಲ್ಲ. ಪೋಲೀಸರು ಒಬ್ಬ ಮನುಷ್ಯನಿಗೆ ದಾರಿಯಲ್ಲಿ ಹೊಡೆದುಕೊಂಡು ಎಳೆದುಕೊಂಡು ಹೋಗಬೇಕೆಂದು ಎಲ್ಲೂ ಇಲ್ಲ. ನಾಯಿಗಳೂ ಸಹ ಹೇಳುತ್ತವೆ. ಆದರೂ ಸಹ ಸರಕಾರ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಲಿಲ್ಲ. ಇದರ ಹಿಂದೆ ಸರಕಾರದ ಕೈ ಇದೆ. ಅದಕ್ಕೋಸ್ಕರ ಈ ಕೊಲೆ ನಡೆದಿದೆ ಎಂಬ ಮಾತು ಇಡೀ ದೇಶಕ್ಕೇ ಗೊತ್ತಿದೆ. ಸಿದ್ಧರಾಮೇಶ್ ಅವರು ರಕ್ಷಣೆ ಬೇಕೆಂದು ಹೇಳಿ ಮೂರು ನಾಲ್ಕು ಸಾರಿ ಬರೆದಿದ್ದಾರೆ. ಯಾವ ಪೋಲೀಸರ ಮೇಲೆ ಇವತ್ತು ಆಪಾದನೆ ಇತ್ತು, ಯಾವ ಪೋಲೀಸರು ಕೈಯಲ್ಲಿ ಕಾನೂನು ತೆಗೆದುಕೊಂಡು ರಸ್ತೆಯಲ್ಲಿ ಹೊಡೆದಿದ್ದಾರೆ, ಪ್ರಜಾ ಪ್ರಭುತ್ವದಲ್ಲಿ ಇಂತಹ ಅಶಾಂತಿಯನ್ನು ಉಂಟು ಮಾಡಿದಂಥ ಪೋಲೀಸರು ಇದ್ದರೂ ಕೂಡಾ, ಅವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿಲ್ಲ, ಆ ಸಿದ್ಧರಾಮೇಶ ಅವರು ನನಗೆ ಪ್ರಾಣ ಭಯ ಇದೆ ಎಂದು ಹೇಳಿದ್ದರು. ಅಂದಮೇಲೂ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಇದು ನಿಮ್ಮ ಕರ್ತವ್ಯ ಇತ್ತು. ಆಮೇಲೆ ಮರ್ಡರ್ ಆಯಿತು. ಮರ್ಡರ್ ಆದಮೇಲೆ ನಾನು ಪ್ರಸ್ತಾಪ ಮಾಡಿದ್ದೆ. ನಾಯಿಗಳು ತಿರುಗಿ ತಿರುಗಿ ಬಂದು ಆ ಸಬ್ ಇನ್‌ಸ್ಪೆಕ್ಟರ್ ಮುಂದೆ ಹತ್ತಿರ ಬಂದು ನಿಂತುಕೊಂಡವು. ನಾಯಿಗಳು ಬಂದು ಬಂದು ಅದೇ ವ್ಯಕ್ತಿ ಹತ್ತಿರ ನಿಂತುಕೊಂಡವು ಮಾನ್ಯ ಮುಖ್ಯಮಂತ್ರಿಗಳಿಗೆ, ನಾಯಿಗಳು ಪೋಲೀಸರ ಹತ್ತಿರ ಬಂದು ನಿಂತವು, ಇದರಲ್ಲಿ ಇವರು ಇದ್ದಾರೆ ಎಂಬ ಮಾತನ್ನು ನಾನು ಹೇಳಿದೆ. ಆಗ ಮುಖ್ಯಮಂತ್ರಿಗಳು ಏನೂ ಆಕ್ಷನ್ ತೆಗೆದುಕೊಳ್ಳಲಿಲ್ಲ. ಸಿದ್ಧರಾಮೇಶ ಏನೋ ಬರೆಯುತ್ತಿದ್ದ, ಅದರ ಪರಿಣಾಮ ಈ ರೀತಿ ಆಗಿದೆ ಎಂದು ಮಾನ್ಯ ಮುಖ್ಯ

ಮಂತ್ರಿಗಳು ಹೇಳಿದರು. ಪೋಲೀಸರು ಕೊಲೆ ಮಾಡುತ್ತಾರೆಯೇ ಎಂದರು. ಈ ರೀತಿ ಹೇಳಿ ಇವರು ಕೊಲೆ ಮಾಡುವುದಕ್ಕೆ ಸಪೋರ್ಟ್ ಮಾಡುತ್ತಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಬೇಕಾದರೆ ಕಡತ ತೆಗೆದು ನೋಡಿ. ಪೋಲೀಸರ ಹಿಂದೆ ಸರಕಾರದ ಕೈ ಇದೆ. ಸರಕಾರ ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಜವಾಬ್ದಾರಿ ಇದ್ದಾರೆ. ಈ ದೇಶದಲ್ಲಿ ಜನಕ್ಕೆ ಇವತ್ತು ರಕ್ಷಣೆ ಇಲ್ಲ. ನಾನು ಒಂದು ಮಾತು ಹೇಳಬಹುದು, ನಮ್ಮ ರಾಜ್ಯದಲ್ಲಿ ಜನತಾ ಪಕ್ಷ ಬಂದ ನಂತರ ಕೊಲೆಗಳು ಆಗುತ್ತಿವೆಯೇ ಹೊರತು ಬೇರೆ ಏನೂ ಕೆಲಸ ಆಗುತ್ತಿಲ್ಲ. ಆಡಜರ್ನಮೆಂಟ್ ಮೋಷನ್‌ನಲ್ಲಿ ನಾವು ಏನು ಕೊಟ್ಟಿದ್ದೇವೆ ಎಂದರೆ, ಮುಖ್ಯಮಂತ್ರಿಯವರು ಪರ್ಸನಲ್ ಇದಕ್ಕೆ ರೆಸ್‌ಪಾನ್ಸಿಬಲ್ ಇದ್ದಾರೆ, ಹಿಶುಡ್ ರಿಸೈನ್ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ಮಹಾದೇವ್.—ಅಧ್ಯಕ್ಷರೇ, ನಾನೂ ಇದಕ್ಕೆ ಸೈನ್ ಮಾಡಿದ್ದೇನೆ.

ಅಧ್ಯಕ್ಷರು.—ಮಂತ್ರಿಗಳು ಏನು ಹೇಳುತ್ತಾರೋ, ನೋಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಂತಹ ಬಹಳ ಗಂಭೀರವಾದ ವಿಷಯಗಳು ಬಂದಾಗ ಸದಸ್ಯರಿಗೆ ಸಾಕಷ್ಟು ಅವಕಾಶ ಮಾಡಿಕೊಡಬೇಕಾಗುತ್ತದೆ. ಇನ್ನೂ 2-3 ಜನ ಮಾತನಾಡುವವರು ಇದ್ದಾರೆ. ದಯಮಾಡಿ ಅವಕಾಶ ಮಾಡಿಕೊಡಬೇಕು.

Mr. Speaker.—Already three important people have spoken about the aidmissiblity of the adjournment motion ಉಪನಾಯಕರು ಮಾತನಾಡಿದ ಮೇಲೆಎಲ್ಲರಿಗೂ ಅವಕಾಶ ಕೊಡಬೇಕೆಂದು ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೊಡಬೇಕೆಂದೇನೂ ರೂಲ್ ಇಲ್ಲ. ಹೊಸ ನಿಯಮ ಹಾಕಬೇಡಿ.

ಶ್ರೀ ಪಂಪಾಪತಿ.—ಮಾನ್ಯ ಮಹದೇವ್‌ರವರು ಮೈಸೂರು ಜಿಲ್ಲೆಯಿಂದ ಬಂದಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರ ಶಿಫಾರಸ್ಸಿನ ಮೇಲೆ, ಅವರು ಮಾತನಾಡಲಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಎಲ್ಲರೂ ಮಾತನಾಡುವ ಸಂಪ್ರದಾಯ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರಲ್ಲಿ ಪೋಲೀಸಿನವರು ಇನ್‌ವಾಲ್ ಆಗಿದ್ದಾರೆ. ಇದು ಒಬ್ಬ ಪತ್ರಿಕಾಕರ್ತನ ಕೊಲೆ ಪ್ರಶ್ನೆ.

ಅಧ್ಯಕ್ಷರು.—ಈ ವಿಚಾರವನ್ನು ಎರಡು ದೃಷ್ಟಿಯಿಂದ ನೋಡಬೇಕಾಗುತ್ತದೆ. ಇದರ ಬಗ್ಗೆ ಹಿಂದೆ ಚರ್ಚೆಯಾಗಿದೆ. It has taken the whole day.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರ ಮಿಷನರಿ ಉಪಯೋಗಿಸಿಕೊಂಡು ಜನರನ್ನು ಪತ್ರಿಕಾಕರ್ತರನ್ನು, ರಾಜಕಾರಿಣಿಗಳನ್ನು ಕೊಲೆ ಮಾಡುತ್ತಿದೆ. ಇದರ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ಸೂಕ್ತವಲ್ಲ ಎಂದರೆ ಮತ್ತೆ ಯಾರ ಬಗ್ಗೆ ಮಾತನಾಡಬೇಕು. ಇದು ಸೀರಿಯಸ್ ಅಲ್ಲದೆ ಮತ್ತೆ ಯಾವುದು ?

ಅಧ್ಯಕ್ಷರು.—ನೀವು ಸದನದಲ್ಲಿ ಹಿರಿಯ ಸದಸ್ಯರಿದ್ದೀರಿ, ಮಾನ್ಯ ವಿರೋಧಪಕ್ಷದ ನಾಯಕರು ಹೊಸಸಂಪ್ರದಾಯ ಹಾಕಬೇಡಿ ಎಂದು ಹೇಳಿದ್ದಾರೆ. The motion hall not revive diccussion on a matter which has alreaday been discussed in the same session.

Sri M. Mallikarjuna Khrge.—At that time, the Govt. was not involved. To-day the police as well as the Government is involved. This is a separate subject than what was discussed earlier.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರ ಇದರ ಬಗ್ಗೆ ತನಿಖೆ ಮಾಡಿದೆ, ಅರೆಸ್ಟ್ ಮಾಡಿದ್ದಾರೆ. ಸರ್ಕಾರ ಪ್ರಾಮಾಣಿಕವಾಗಿ ಕೆಲಸ ಮಾಡಿದೆ, ಆದುದರಿಂದ ಮುಖ್ಯಮಂತ್ರಿಗಳು ಇನ್ನು ಹೇಗೆ ಕೆಲಸ ಮಾಡಬೇಕು ? ಇನ್ನೆಷ್ಟು ಕೆಲಸ ಮಾಡಬೇಕು ?

(ಗೊಂದಲ)

ಶ್ರೀ ವಿ. ಧನಂಜಯಕುಮಾರ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಸರ್ಕಾರದ ಯಾವುದೇ ಮಂತ್ರಿಗಳಾಗಲೀ, ಮುಖ್ಯಮಂತ್ರಿಗಳಾಗಲೀ, ಈ ಅಡ್ಜರ್ನ್‌ಮೆಂಟ್ ಮೋಷನ್ ಕಲಂಗಳನ್ನು ಉಪಯೋಗ ಮಾಡಿಕೊಂಡು ರಾಜಿನಾಮೆ ಕೇಳುವ ಅವಕಾಶ ಬರುವುದಿಲ್ಲ. ದಯಮಾಡಿ ಇದನ್ನು ಇಲ್ಲಿಗೆ ತಟಸ್ಥ ಮಾಡಿ ಮುಂದಿನ ಕಲಾಪಗಳನ್ನು ನಡೆಸಿಕೊಡುವ ಅವಕಾಶ ಮಾಡಿಕೊಡಬೇಕು. ಇಲ್ಲಿ ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕ್ರಿಯಾಲೋಪ ಬಹಳ ಚೆನ್ನಾಗಿದೆ. ಸರ್ಕಾರ ಏನಾದರೂ ಮಾಡಲಿ ನಾವು ರಾಜಿನಾಮೆ ಕೇಳಬಾರದು. ಬಿ. ಜೆ. ಪಿ. ಅವರು ಮಾತ್ರ ಕೇಳಬಹುದು, ಬೇರೆಯವರು ಮಾತ್ರ ಕೇಳಬಾರದೆಂದು ಹೇಳುತ್ತಿದ್ದಾರೆ.

ಶ್ರೀ ವಿ. ಧನಂಜಯಕುಮಾರ್.—ನಾವು ರಾಜಿನಾಮೆ ಕೊಡಿ ಎಂದು ಕೇಳಬೇಕಾಗಿಲ್ಲ. ಸಂದರ್ಭ ಬಂದರೆ ಅವರೇ ಕೊಡುತ್ತಾರೆ. ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ರೂಲಿಂಗ್ ಕೊಡಬೇಕು. ಅಡ್ಜರ್ನ್‌ಮೆಂಟ್ Motion ನನ್ನು ಉಪಯೋಗಮಾಡಿಕೊಂಡು ಸರ್ಕಾರ ಮತ್ತು ಮಂತ್ರಿಗಳು ರಾಜಿನಾಮೆ ಕೇಳುವುದು ಸರಿಯಲ್ಲ.

ಅಧ್ಯಕ್ಷರು.—ಮುಖ್ಯಮಂತ್ರಿಗಳ ರಾಜಿನಾಮೆ ಕೇಳುವುದಕ್ಕೆ ಬೇರೆ ನಿಲುವಳಿ ಸೂಚನೆ ಇಲ್ಲ.

ಶ್ರೀ ಬಿ. ಎನ್. ಯಡಿಯೂರಪ್ಪ.—ತನಿಖೆ ಮಾಡಿರುವುದು ತಪ್ಪು, ಅರೆಸ್ಟ್ ಮಾಡಿರುವುದು ತಪ್ಪು ಎಂದರೆ ಹೇಗೆ, ಸರ್ಕಾರ ಪ್ರಾಮಾಣಿಕವಾಗಿ ಕೆಲಸ ಮಾಡಿದೆ.

(ಗೊಂದಲ)

Mr. Speaker.—I request the Hon. member Sri. M. Mahadev to please resume his seat.

ಶ್ರೀ ಎಂ. ಮಹದೇವ್.—ಈ ವಿಚಾರ ಬಹಳ ಗಂಭೀರವಾದುದು. ಪಕ್ಷದ ನಾಯಕರು ಬಹಳಷ್ಟು ವಿಸ್ತಾರವಾಗಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಈ ಒಂದು ಪ್ರಶ್ನೆ "ಬೇಲಿಯೇ ಎದ್ದು ಹೊಲ ಮೆಯ್ದಂತೆ" ಎನ್ನುವ ಪರಿಸ್ಥಿತಿ ಇರುವಾಗ, ರಕ್ಷಣೆ ಮಾಡುವುದಕ್ಕಾಗುತ್ತದೆಯೇ ? ನಿಜವಾಗಿಯೂ ಸಾರ್ವಜನಿಕರ ಬಗ್ಗೆ ಸರ್ಕಾರಕ್ಕೆ ಕಳವಳ ಇದ್ದರೆ ಅವರು ಕೂಡಲೇ, ರಾಜಿನಾಮೆ ಕೊಡಬೇಕು, ಅವರದ್ದು ದಪ್ಪ ಚರ್ಮ ಆಗಿದ್ದರೆ ಇಟ್ಟುಕೊಳ್ಳಲಿ. ಇವತ್ತು ಜನತಾ ಸರ್ಕಾರದಿಂದ ನಮ್ಮ ಪ್ರಾಣ ಹಾನಿ, ಮಾನ ಹಾನಿ ಆಗುತ್ತಿದೆ. ನಮಗೆ ರಕ್ಷಣೆ ಸಿಗುತ್ತದೋ ಇಲ್ಲವೋ ಎಂಬ ಅನುಮಾನ ಇದೆ. ಸಾರ್ವಜನಿಕರ ರಕ್ಷಣೆ ಮಾಡುವಂತಹ ಇಲಾಖೆ ಇರುವಾಗ, ಅವರೇ ಕೊಲೆಗಡುಕರಾದರೆ, ಬೇರೆ ಯಾರ ಹತ್ತಿರ ರಕ್ಷಣೆಗೆ ಹೋಗುವುದು. ಮುಖ್ಯಮಂತ್ರಿಗಳು ಒಬ್ಬರೇ ಅಲ್ಲ, ಎಲ್ಲಾ ಮಂತ್ರಿಗಳು ರಾಜಿನಾಮೆ ಕೊಡಬೇಕು. ಇಲ್ಲದೆ ಹೋದರೆ ಜನ ಕೊಡಿಸುತ್ತಾರೆ.

(ಗೊಂದಲ)

ಶ್ರೀ ಎಂ. ಮಹದೇವ್.—ಇದರ ಬಗ್ಗೆ ಸಿ. ಒ. ಡಿ. ಅವರು ಒಂದು ಚಿತ್ರ ಕೊಟ್ಟಿದ್ದಾರೆ. ಈ ಚಿತ್ರವನ್ನು ಸಿ. ಬಿ. ಐ. ತನಿಖೆಗೆ ವ್ಯವಸ್ಥೆ ಮಾಡಬೇಕು. ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಪಿ. ರಾಮ್‌ದೇವ್.—ಒಂದುಕಡೆ ಒಳ್ಳೆಯ ಕೆಲಸ ಮಾಡಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ ; ಇನ್ನೊಂದು ಕಡೆ ರಾಜಿನಾಮೆ ಕೊಡಿ ಎಂದು ಹೇಳುತ್ತಾರೆ. ಇವರಿಗೆ ತಲೆ ಏನಾದರೂ ಇದೆಯೇ ?

ಅಧ್ಯಕ್ಷರು.—ಅವರು ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕೆಂದು ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ವಿರೋಧಪಕ್ಷದ ಉಪನಾಯಕರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಈ ಒಂದು ನಿಲುವಳಿ ಸೂಚನೆ ಏನಿದೆ ಅದು ಸ್ವಲ್ಪ ವ್ಯತ್ಯಾಸ ಇದೆ. ಈ ಸದನದಲ್ಲಿ ಮೊದಲೇ ಚರ್ಚೆಯಾಗಿದೆ, ಈಗ ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎನ್ನುವ ಪ್ರಶ್ನೆ ಇಲ್ಲ. ಈಗಾಗಲೇ ತಮಗೂ ಕೂಡ ಗೊತ್ತಾಗಿದೆ. ಅನೇಕ ಸದಸ್ಯರಿಗೂ ಗೊತ್ತಾಗಿದೆ. ಸರ್ಕಾರಕ್ಕೂ ಮನವರಿಕೆಯಾಗಿದೆ. ಸಿ.ಒ.ಡಿ. ತನಿಖೆ ಆದಮೇಲೆ ಇದರಲ್ಲಿ ಪೋಲೀಸ್ ಅಧಿಕಾರಿಗಳ ಕೈವಾಡ ಇದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗಿದೆ. ಪೋಲೀಸರು ಇದನ್ನು ಮಾಡಬೇಕಾದರೆ ಇದರ ಹಿಂದೆ ಸರ್ಕಾರದ ಕೈ ಇರಬಹುದು ಎನ್ನುವಭಾವನೆ ಬರುತ್ತದೆ. ಹಿಂದೆ ನಾವು ಸದನದಲ್ಲಿ ಈ ವಿಷಯದ ಬಗ್ಗೆ, ಅಂದರೆ ಒಬ್ಬ ಸಾಮಾನ್ಯ ಮನುಷ್ಯನ ಕೊಲೆ ಆದರೆ, ಯಾರು ಕೊಲೆ ಮಾಡಿದರು, ಎಂತೆಂಥವರು ಕೊಲೆ ಮಾಡಿದ್ದಾರೆ, ತನಿಖೆ ಮಾಡಿಸಿ ಎಂದು ಕೇಳಿದ್ದು ಅಷ್ಟೆ. ಇದರ ಹಿನ್ನೆಲೆ ಏನು, ಯಾರ ಕೈವಾಡ ಇದೆ, ಯಾರು ಇದರಲ್ಲಿ ಭಾಗವಹಿಸಿದ್ದಾರೆ ಎನ್ನುವುದು ಆ ಸಂದರ್ಭದಲ್ಲಿ ಇರಲಿಲ್ಲ. ಈ ಸದನದಲ್ಲಿ ಹಿಂದೆ ಹೇಳಿದಾಗ ಕೆಲವು ಮಂತ್ರಿಗಳು ಪ್ರೆಸ್ ಕಾನ್‌ಫರೆನ್ಸ್‌ಗೆ ಹೋದಾಗ ತ್ಪ್ಪಾಟನ್ ಮಾಡಿದರು. ಈ ಸಬ್ಜಕ್ಟ್ ಚರ್ಚೆಗೆ ಬಂದಿರಲಿಲ್ಲ. ಈ ವಿಷಯದಲ್ಲೂ ಕೂಡ ಬಂದಿಲ್ಲ. ಇದನ್ನು ಪ್ರಸ್ತಾಪ ಮಾಡಿದಾಗ ಇದರಲ್ಲಿ ಪೋಲೀಸರ ಕೈವಾಡ ಇದೆ ಎಂದು ಹೇಳಿದ ಮೇಲೆ ಬೇಕಾದರೆ ಸಿ.ಒ.ಡಿ. ಯಿಂದ ತನಿಖೆ ಮಾಡಿಸಬಹುದೆಂದು ನಾವು ಒತ್ತಾಯ ಮಾಡಿದ ಮೇಲೆ ಒಪ್ಪಿಕೊಂಡರು. ತಮ್ಮ ಚೇಂಬರಿಗೆ ನಾವು ಬಂದಾಗ ತಾವು ಸಹ ಸಿ. ಒ. ಡಿ. ಯಿಂದ ತನಿಖೆ ಮಾಡಿಸಲು ಒಪ್ಪಿಕೊಂಡಿರಿ. ಸಿ. ಒ. ಡಿ. ತನಿಖೆ ಕಂಟಿನ್ಯೂ ಮಾಡಿದ್ದಾರೆ. ಸಿ.ಬಿ.ಐ. ತನಿಖೆ ಏನಾಗಿದೆಯೋ ಇನ್ನೂ ಗೊತ್ತಾಗಿಲ್ಲ. ಇದಕ್ಕೆ ಸ್ಪಷ್ಟ

ವಾದ ಉತ್ತರ ಬೇಕು. ಇದರಲ್ಲಿ ಗೌರ್ನಮೆಂಟ್. ಕೈವಾಡ ಇದೆ ಇದರ ಬಗ್ಗೆ ಜರ್ಜಿ ಮಾಡಲಿಕ್ಕೆ ಅವಕಾಶ ಮಾಡಿಕೊಡಿ. ಅದಕ್ಕೆ ನಾವು ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಡುತ್ತೇವೆ. ಸಿದ್ದರಾಮೇಶ ಕೊಲೆ ಆಯಿತು. ಇದರಲ್ಲಿ ಪೋಲೀಸ್ ಇನ್‌ವಾಲ್ವಮೆಂಟ್ ಇದೆ. ಈ ಕೆಲಸವನ್ನು ಮುಚ್ಚಿಹಾಕುವುದಕ್ಕೆ ಸರ್ಕಾರ ಯತ್ನಿಸುತ್ತಿದೆ. ಹೀಗೆ ಆದರೆ ನಾಳೆ ರಾಜಕೀಯದವರನ್ನು ಕೊಲೆ ಮಾಡುತ್ತಾರೆ. ಪ್ರೆಸ್‌ನವರು ಪಬ್ಲಿಕ್ ಒಪೀನೀಯನ್ ಮೊಲ್ಡ್ ಆಪ್ ಮಾಡುವುದಕ್ಕೆ ತಮ್ಮದೇ ಆದ ಲೇಖನಗಳನ್ನು ಬರೆಯುತ್ತಾರೆ. ರಿಪೋರ್ಟ್‌ರ್ಸ್‌ಗಳಿಗೆ ಮತ್ತು ಎಡಿಟರ್‌ಗಳಿಗೆ ಇದರಿಂದ ತುಂಬಾ ಹೆದರಿಕೆ ಉಂಟಾಗಿದೆ. ಆದುದರಿಂದ ಅದಕ್ಕೆ ಸ್ಪಷ್ಟವಾದ ಜರ್ಜಿ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ॥ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಈ ನಿಲುವಳಿ ಸೂಚನೆಯನ್ನು ಸದನದ ಮುಂದೆ ಇಟ್ಟಿದ್ದಾರೆ. ಪ್ರಾರಂಭದಲ್ಲಿ ಅವರು ಕರ್ನಾಟಕದ ಪೋಲೀಸ್ ಖಾತೆಯ ಬಗ್ಗೆ, ಪೋಲೀಸರ ದಕ್ಷತೆ ಬಗ್ಗೆ ಬಹಳ ಶ್ಲಾಘನೆಯನ್ನು ವ್ಯಕ್ತಪಡಿಸಿದ್ದ ಈರು ವಿಷಯ ಈ ಸದನದಲ್ಲಿ ನಿಲುವಳಿ ಸೂಚನೆಯ ಮೇಲೆ ಬಂದಾಗ, ವಿರೋಧ ಪಕ್ಷದ ನಾಯಕರು ಮತ್ತು ಇನ್ನಿರರು ಈ ಸಂದರ್ಭದಲ್ಲಿ ಸಿದ್ದರಾಮೇಶರ ಕೊಲೆಯಲ್ಲಿ ಪೋಲೀಸರ ಕೈವಾಡ ಸಹ ಇರಬಹುದೆಂದು ಸಂಶಯ ಹೇಳಿದಂಥಾದ್ದು ಸ್ಪಷ್ಟವಾಗಿ ನನಗೆ ನೆನಪು ಇದೆ. ಇಲ್ಲಿ ಪೋಲೀಸ್ ಇಲಾಖೆಯ ಕೈವಾಡ ಇದೆಯೋ ಇಲ್ಲವೋ ಎಂದು ಸರಕಾರವಾಗಲೀ, ಮುಖ್ಯಮಂತ್ರಿಗಳಾಗಲೀ ಆಗ ಹೇಳುವಂತಹ ಪರಿಸ್ಥಿತಿಯಲ್ಲಿ ಇರಲಿಲ್ಲ. ವಿರೋಧ ಪಕ್ಷದ ನಾಯಕರು ಸಂಶಯ ಇವತ್ತು ಸ್ವಲ್ಪಮಟ್ಟಿಗೆ ಸತ್ಯವಾಗಿದೆ. ಪೋಲೀಸ್ ಸಬ್‌ಇನ್ಸ್‌ಪೆಕ್ಟರು ಮತ್ತು ಕಾನ್‌ಸ್ಟೇಬಲ್‌ಗಳನ್ನು ಸಸ್ಪೆಂಡ್ ಮಾಡಿದ ನಂತರ ಇದು ಸಾಬೀತು ಆದ ರೀತಿಯಲ್ಲಿ ಆಗಿದೆ. ನಾವು ಈ ಸದನದಲ್ಲಿ ಸತತವಾಗಿ ಪೋಲೀಸ್ ಸ್ಟೇಷನ್‌ನಲ್ಲಿ ನಿಧನರಾದವರ ಬಗ್ಗೆ, ಮೊನ್ನೆ ಒಬ್ಬರ ನಿಧನರಾದ ಬಗ್ಗೆ ಪ್ರಶ್ನೆ ಬಂದಿತ್ತು.

ಅಧ್ಯಕ್ಷರು.—ಆ ವಿಚಾರ ಈ ನಿಲುವಳಿ ಸೂಚನೆಯಲ್ಲಿ ಇಲ್ಲ.

ಶ್ರೀ ಗೋವಿಂದ. ಪಿ. ಒಡೆಯರಾಜ್.—ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಸೈನ್ ಹಾಕದೇ ಇದ್ದವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಾ ?

ಡಾ॥ ವಿ. ಎಸ್. ಆಚಾರ್ಯ.—ಮಾತನಾಡಲಿಕ್ಕೆ ಬಿಡದಿದ್ದರೆ ಹೇಗೆ ?

Mr Speaker.—I have asked him to speak.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಂತಹ ಸಂದರ್ಭದಲ್ಲಿ ಬೇರೆಯವರಿಗೂ ಕೂಡ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಇವರದ್ದು ಕಾಂಗ್ರೆಸ್ ಟೈಪ್. ನಮ್ಮದು ಜನತಾ ಟೈಪ್. ಮಾನ್ಯ ಸದಸ್ಯರು, ಇನ್ನೊಬ್ಬ ಸದಸ್ಯರಿಗೆ ಹೀಗೇ ಮಾತನಾಡಿ, ಹಾಗೇ ಮಾತನಾಡಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಜಿ. ಪಿ. ಒಡೆಯರಾಜ್.—ಅಡ್‌ಜರ್ನಮೆಂಟ್ ಪೋಷನ್‌ಗೆ ರೂಲ್ಸ್ ಅಂಡ್ ರೆಗ್ಯೂಲೆಶನ್ ಇರಬೇಕು.

(ಗೊಂದಲ)

Mr. Speaker.—I have called Dr. Acharya to speak. Nothing will go to the record.

ಡಾ॥ ವಿ. ಎಸ್. ಆಚಾರ್ಯ.—ಸಾಮಾನ್ಯವಾಗಿ ಈಗ ಪೋಲೀಸ್ ಇಲಾಖೆಯಲ್ಲಿ ಅನೇಕ ವರ್ಷಗಳಿಂದ ನಮಗೆ ಗೊತ್ತಾಗಿದೆ. ಅಜಾಗರೂಕತೆಯಿಂದ ಕ್ರಿಮಿನಲ್ ಕೇಸ್‌ಗಳನ್ನು ಪ್ರವೋಕ್ ಮಾಡಿ ಹಿಂಸೆ ಕೊಡುವುದರಲ್ಲಿ ಸಂತೋಷ ಪಡತಕ್ಕಂತಹ ಅಧಿಕಾರಿಗಳು ಇದ್ದಾರೆ. ಇಂತಹವರನ್ನು ಸ್ಕ್ರೀನ್ ಮಾಡಬೇಕು. ಇವರು ಸೈಕ್ಯೋಸೊಮ್ಯಾಟಿಕ್ ಮೈನಾರಟೀಸ್ ಆಫ್ಸೇ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ ಸಂಸದೀಯ ವ್ಯವಹಾರಕ್ಕೆ ಸಂಬಂಧಪಟ್ಟ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅವರು ಇಂಟರ್‌ಜಕ್ಟ್ ಮಾಡಿ ಮಾತನಾಡುವುದಿದ್ದರೆ ನನ್ನ ಅಭ್ಯಂತರ ಇಲ್ಲ. ಅಡ್‌ಜರ್ನಮೆಂಟ್ ಮೋಷನ್ ಸೂಚನೆಯನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಈಗ ಆದರ ಪ್ರಸ್ತಾಪ ಅವರು ಮಾಡುತ್ತಿದ್ದಾರೆ. ಯಾವ ಸದಸ್ಯರು ದಸ್ಕತ್ತು ಹಾಕಿ ಅಡ್‌ಜರ್ನಮೆಂಟ್ ಮೋಷನ್ ಕೊಟ್ಟಿದ್ದಾರೋ ಅದರ ಪ್ರಸ್ತಾಪ ಮಾಡಲು ತಮ್ಮ ಅನುಮತಿ ಕೇಳಬಹುದು. ಆದರೆ ಅವರು ಮಧ್ಯ ಪ್ರವೇಶ ಮಾಡಿ ಮಾತನಾಡುವುದು ಇದ್ದರೆ ನಮ್ಮದು ಅಡ್ಡಿ ಇಲ್ಲ. ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಡಬೇಕೇ ? ಈ ತರಹ ತಾವು ಅನುಮತಿ ಕೊಟ್ಟರೆ I think we wille be laying down the wrong precedent.

ಅಧ್ಯಕ್ಷರು.—ನಿಲುವಳಿ ಸೂಚನೆ ವಿಚಾರದಲ್ಲಿ ಸಹಿ ಹಾಕಿದ ಸದಸ್ಯರು ಅಷ್ಟೇ ಮಾಡಬೇಕೆಂದು ಇಲ್ಲ. ಸಹಿ ಹಾಕದೆ ಇದ್ದ ಸದಸ್ಯರೂ ಸಹ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವಂತಹ ಸ್ವಾತಂತ್ರ್ಯ ವಿದೆ.

ಭೀಮಣ್ಣ ಖಂಡ್ರೆ.—ಮುಂದೆಯೂ ಸಹ ತಾವು ಯಾವುದಾದರೂ ಇಂಥಹದ್ದು ಬಂದರೆ ಅವಕಾಶ ಕೊಡಬೇಕು.

ಅಧ್ಯಕ್ಷರು.—It means the same.

ಶ್ರೀ ವೀರಪ್ಪ ಮೊಯಿಲಿ.—ಇದು ಹೊಸ ಸಂಪ್ರದಾಯ ; ತಮ್ಮಿಂದಲೇ ಕೇಳಿ ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ಇದು ಹೊಸ ಸಂಪ್ರದಾಯವಲ್ಲ. ಇದು ಸಂಪತ್ತು ಹುಟ್ಟಿದಾಗಿನಿಂದ ಇಲ್ಲಿಯವರೆಗೂ ನಡೆದುಕೊಂಡು ಬಂದ ಹಳೆಯ ಸಂಪ್ರದಾಯ.

ಶ್ರೀ ಎಂ. ವೀರಪ್ಪಮೊಯಿಲಿ.—Thank you for having reminded.

ಡಾ॥ ವಿ. ಎಸ್. ಆಚಾರ್ಯ.—ಅಂತಹ ಅಧಿಕಾರಿಗಳು ಮೈಕ್ರೋಸ್ಕೋಪಿಕ್ ಮೈನಾರಟಿ ಇರಬಹುದು. ಅಂತಹ ಅಧಿಕಾರಿಗಳನ್ನು ಕೆಲಸ ಇಲ್ಲದ ಕಡೆ ಡೆಸ್ಕ್ ವರ್ಕ್ ಇರುವ ಕಡೆ ಹಾಕಬೇಕೆಂದು ನಾವು ಹೇಳುತ್ತಾ ಬಂದಿದ್ದೇವೆ. ಇಂದು ಇಡೀ ಸದನದ ಅಭಿಪ್ರಾಯದ ಮೇರೆಗೆ ತಾವು ಸಿ.ಒ.ಡಿ. ತನಿಖೆಗೆ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ತಾವು ಸಿ.ಒ.ಡಿ. ತನಿಖೆಗೆ ಒಪ್ಪಿಸಿದ ನಂತರ ನಮಗೆ ಕೆಲವೊಂದು ವಿಚಾರಗಳು ಬಂದಿದೆ. ಈ ಹಂತದಲ್ಲಿ ಸರ್ಕಾರ ಮುಕ್ತ ಮನಸ್ಸಿನಿಂದ ತನಿಖೆ ಮಾಡುತ್ತಿದೆಯೆಂದು ವರದಿ ಬಂದಿದೆ. ಇಂತಹ ಸಂದರ್ಭದಲ್ಲಿ ನಿಲುವಳಿ ಸೂಚನೆ ಮೂಲಕ ಈ ವಿಷಯದ ಮೇಲೆ ಚರ್ಚೆ ಮಾಡಿದರೆ ಅವರ ದಿಕ್ಕು, ಜಾಡು ಬದಲಾಗಿ ಏನಾದರೂ ವಿಘ್ನ ಬಂದು ಪುನಃ ಅಪರಾಧಿಗಳು ತಪ್ಪಿ ಹೋಗುವಂತಹ ಪರಿಸ್ಥಿತಿ ಬರಬಾರದು. ಮುಖ್ಯಮಂತ್ರಿಗಳು ಇದರ ಬಗ್ಗೆ ದಿಟ್ಟ ನಿಲುವನ್ನು ವಹಿಸಿ ತನಿಖೆಗೆ ಅವಕಾಶ ಮಾಡಿಕೊಟ್ಟಿದ್ದರಿಂದ ಇದರ ಬಗ್ಗೆ ಪುನಃ ಹೆಚ್ಚಿನ ರೀತಿಯಲ್ಲಿ ಅನಾವಶ್ಯಕ ಚರ್ಚೆ ಮಾಡುವುದು ಬೇಡವೆಂದು ಈ ಸದನದಲ್ಲಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ.—ನನಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಸೂರ್ಯನಾರಾಯಣರಾವ್.—ಮಾನ್ಯ ಸಭಾಧ್ಯಕ್ಷರೇ, ನಮ್ಮೆಲ್ಲರಿಗೂ ಗುಲ್ಬರ್ಗದಲ್ಲಿ ಏನು ಪತ್ರಕರ್ತರ ಕೊಲೆಯಾಗಿದೆ.....

(ಗೊಂದಲ)

ಅಧ್ಯಕ್ಷರು.—ನಿಲುವಳಿ ಸೂಚನೆಯಲ್ಲಿ ಇರುವುದು ಪತ್ರಕರ್ತರ ಕೊಲೆಯ ಬಗ್ಗೆ ಅಲ್ಲ.

ಶ್ರೀ ಸೂರ್ಯನಾರಾಯಣರಾವ್.—ನಾನು ಮುಖ್ಯಮಂತ್ರಿ ರಾಜೀನಾಮೆ ಬಗ್ಗೆ ಹೇಳುತ್ತಾ ಇಲ್ಲ. ಪತ್ರಿಕೆಯಲ್ಲಿ ಬಂದಿರುವುದು ಕನ್‌ಸ್ಪೈಯರ್ ಮಾಡಿ ಸಿದ್ದರಾಮೇಶರ ಕೊಲೆಯನ್ನು ಪೋಲೀಸರು ಮಾಡಿದರು ಎನ್ನತಕ್ಕದ್ದು ಇದೆ. ಇದು ಬಹಳ ಗಂಭೀರವಾದ ಆಪಾದನೆ ಇದು ಗಂಭೀರವಾಗಿ ವಿಚಾರಣೆ ಯಾಗಬೇಕು. ಎಲ್ಲದಕ್ಕೂ ಮುಖ್ಯಮಂತ್ರಿಗಳ ರಾಜಿನಾಮೆಯನ್ನು ಜೋಡಣೆ ಮಾಡಿ ಕೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ವೀರಪ್ಪ ಮೊಯಿಲಿ.—ಕೇರಳಾದಲ್ಲಿ ತಾವು ಏನು ಡಿಮ್ಯಾಂಡ್ ಮಾಡಿದ್ದೀರಿ ? ಕರುಣಾಕರನ್‌ರವರು ರಾಜೀನಾಮೆಯನ್ನು ಏಕೆ ಕೇಳಿದಿರಿ ? ತಾವು ತಮ್ಮ ಪರಂಪರೆಯನ್ನು ನೋಡಿಕೊಳ್ಳಿ.

ಶ್ರೀ ಸೂರ್ಯನಾರಾಯಣರಾವ್.—ಕೇರಳದಲ್ಲಿರತಕ್ಕ ಎಲ್ಲ ಕಟ್ಟುಗಳು ಮತ್ತು ಸಂದರ್ಭಗಳನ್ನು ವಿಚಾರಣೆ ಮಾಡಿ ನಾವು ಮಾತನಾಡಬೇಕು. ಎಲ್ಲಾ ವಿಚಾರದಲ್ಲಿಯೂ ಕೇರಳಾ ಎಂದು ಹೇಳಿಕೊಂಡು ಔಟ್ ಆಫ್ ಕಾಂಟೆಕ್ಸ್ಟ್ ಚರ್ಚೆ ಮಾಡಬಾರದು.

ಶ್ರೀ ಎಂ. ವೀರಪ್ಪಮೊಯಿಲಿ. —ತಾವು ರಾಜೇಂದ್ರನ್ ಕೇಸ್ ಬಗ್ಗೆ ಏನು ಮಾಡಿದಿರಿ ?

As ordered by the chaing the Procedings (Marked) are expunged.

Mr. Speaker.—Now the House stands adjourned to meet again after 10 minutes.

(The House adjourned at 12.16 to meet again after ten minutes)

(ಸಭೆಯು ಪುನಃ 2-40ಕ್ಕೆ ಸಮಾವೇಶಗೊಂಡಿತು.)

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು.—ಈ ದಿನ ಈ ಸಭೆಯಲ್ಲಿ ನಡೆದ ಕೆಲವು ಅಹಿತಕರ ಘಟನೆಗಳನ್ನು ಮರೆಯುವ ಸದುದ್ದೇಶದಿಂದ ಹಿರಿಯ ಸದಸ್ಯರು ಮತ್ತು ಶ್ರೀಮಾನ್ ಶಿವಮೂರ್ತಿಯವರು ನನ್ನ ಕಛೇರಿಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಆದರಂತೆ ಅವರನ್ನು ಸಭೆಗೆ ಬರುವುದಕ್ಕೆ ಅನುಮತಿ ಕೊಟ್ಟಿದ್ದೇನೆ. ಹಾಗೂ ನಾನು ಅವರ ಬಗ್ಗೆ ಮಾಡಿದಂಥ ತೀರ್ಪನ್ನು ಮನ್ನಾ ಮಾಡಲಾಗಿದೆ. ಇದರ ಜೊತೆಯಲ್ಲಿ ಶ್ರೀ ಸೂರ್ಯನಾರಾಯಣರವ್ ಅವರು ಪ್ರಾರಂಭ ಮಾಡಿದ ಭಾಷಣದಿಂದ ಹಿಡಿದು, ಕೆಲವು ರಾಜಕೀಯ ಪಕ್ಷಗಳ ಸದಸ್ಯರು ವ್ಯಕ್ತ ಮಾಡಿದ ಅಭಿಪ್ರಾಯದನರೆಗೂ ನಡವಳಿಕೆಯನ್ನು ಕಡತದಿಂದ ತೆಗೆದುಹಾಕಲಾಗಿದೆ. ಈ ದಿವಸದ ಸಭೆಯನ್ನು ನಾಳೆ ಬೆಳಿಗ್ಗೆ 11-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

ಸಭೆಯು ಈಗ ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 11-00 ಗಂಟೆಗೆ ಸೇರುವುದು.

(ಸಭೆಯು ಎರಡು ಘಂಟೆ ನಲವತ್ತು ಮೂರು ನಿಮಿಷಕ್ಕೆ ಮುಕ್ತಾಯವಾಗಿ ಪುನಃ 10 ನೇ ತಾರೀಖು ಏಪ್ರಿಲ್ ಮಾಹೆ 1984ರ ಮಂಗಳವಾರದಂದು ಹನ್ನೊಂದು ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)

—•—